# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಮೇ 30, 2021

ಸಂಪುಟ : 48 ಸಂಚಿಕೆ : 16 ☎ 254736 91642 99999 RNI No: 27369/75, KA/SK/CTA-275/2021-2023. O/P @ J.D. Circle P.O. ಪುಟ : 8 ರೂ : 4.00 www.janathavani.com janathavani@mac.com


## ವಾರದ ಎರಡು ದಿನ ದಿನಸಿ-ಮದ್ಯ ಖರೀದಿ

**ಬೆಳಿಗ್ಗೆ 6ರಿಂದ 12ರವರೆಗೆ ಕಿರಾಣಿ ಖರೀದಿಗೆ ಅನುಮತಿ: ಡಿಸಿ**

ದಾವಣಗೆರೆ, ಮೇ 29 – ನಾಳೆ ಮೇ 31ರ ಸೋಮವಾರ ಹಾಗೂ ಜೂ.3ರ ಗುರುವಾರದಂದು ಬೆಳಿಗ್ಗೆ 6ರಿಂದ ಮಧ್ಯಾಹ್ನ 12ರವರೆಗೆ ಕಿರಾಣಿ ಅಂಗಡಿಗಳು, ದಿನಸಿ, ಮಾಂಸ – ಮೀನು ಹಾಗೂ ಮದ್ಯದ ಅಂಗಡಿಗಳಿಗೆ ಅನುಮತಿ ಇದೆ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ.

ತಮ್ಮ ಕಚೇರಿಯಲ್ಲಿ ಕೊರೊನಾ ನಿಯಂತ್ರಣ ಮಾರ್ಗಸೂಚಿ ಕುರಿತು ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿರುವ ಅವರು, ಮುಂದಿನ ವಾರದಂದು ಈ ಎರಡೂ ದಿನ ಹೊರತು ಪಡಿಸಿ ಉಳಿದ ದಿನಗಳಂದು ನಿರ್ಬಂಧ ಇರಲಿದೆ. ಪ್ರತಿದಿನ ಬೆಳಿಗ್ಗೆ 6ರಿಂದ 10 ಗಂಟೆಯವರೆಗೆ ಹಾಲು ಹಾಗೂ ಮೊಟ್ಟೆಗಳ ಮಾರಾಟಕ್ಕೆ ಅನುಮತಿ ಇದೆ ಎಂದವರು ತಿಳಿಸಿದ್ದಾರೆ.

ಕೃಷಿ ಚಟುವಟಿಕೆಗಳಿಗೆ ಅನುವಾಗುವಂತೆ ಅಗತ್ಯ ವಸ್ತುಗಳಾದ ಬೀಜ, ಗೊಬ್ಬರ, ಕೀಟ ನಾಶಕಗಳು, ಕೃಷಿ ಕೋಯ್ಲು ಯಂತ್ರೋಪಕರಣಗಳ ಸಾಗಣೆ ಮತ್ತು ಸಂಬಂಧಿಸಿದ ಅಂಗಡಿ ಮತ್ತು (2ನೇ ಪುಟಕ್ಕೆ)

## ಕೊರೊನಾ : ಅನಾಥರಾದ ಮಕ್ಕಳಿಗೆ ಕೇಂದ್ರದ ನೆರವು

**ತಲಾ 10 ಲಕ್ಷ ರೂ. ನಿಧಿ, ಶಿಕ್ಷಣಕ್ಕೆ ಸಹಾಯ**

ನವದೆಹಲಿ, ಮೇ 29 – ಕೇಂದ್ರದ ಬಿಜೆಪಿ ಸರ್ಕಾರದ ಎರಡನೇ ವರ್ಷಾಚರಣೆಗೆ ಮುಂಚೆ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಕೊರೊನಾದಿಂದ ಅನಾಥರಾದ ಮಕ್ಕಳಿಗೆ ನೆರವು ಯೋಜನೆ ಪ್ರಕಟಿಸಿದ್ದು, ಪ್ರತಿ ಮಗುವಿನ ಶಿಕ್ಷಣದ ವೆಚ್ಚ ಭರಿಸುವುದಾಗಿ ಹಾಗೂ 18 ವರ್ಷ ತುಂಬಿದ ಸಂದರ್ಭದಲ್ಲಿ 10 ಲಕ್ಷ ರೂ. ದೊರೆಯುವಂತೆ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದ್ದಾರೆ.

ಕೊರೊನಾದಿಂದ ಅನಾಥರಾದ ಮಕ್ಕಳಿಗೆ ಪಿಎಂ - ಕೇರ್ಸ್ ಮೂಲಕ ನೆರವು ನೀಡಲು ಪ್ರಧಾನಿ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ನಿರ್ಧರಿಸಲಾಗಿದೆ. ಇಂತಹ ಮಕ್ಕಳ ಹೆಸರಿನಲ್ಲಿ ಸ್ಥಿರ ಠೇವಣಿ ಖಾತೆ ತೆರೆಯಲಾಗುವುದು. ಈ (2ನೇ ಪುಟಕ್ಕೆ)

### 'ಸಿಎಂ ಬಾಲಸೇವಾ ಯೋಜನೆ'

ಬೆಂಗಳೂರು, ಮೇ 29- ಕೋವಿಡ್ ನಿಂದಾಗಿ ಹೆತ್ತವರನ್ನು ಕಳೆದುಕೊಂಡ ಮಕ್ಕಳ ನೆರವಿಗಾಗಿ ರಾಜ್ಯ ಸರ್ಕಾರ 'ಮುಖ್ಯಮಂತ್ರಿ ಬಾಲಸೇವಾ ಯೋಜನೆ'ಯನ್ನು ಜಾರಿಗೆ ತರಲಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದ್ದಾರೆ.

ಕೇಂದ್ರ (2ನೇ ಪುಟಕ್ಕೆ)

### ರಾಜ್ಯ ಸರ್ಕಾರದಿಂದ ತಿಂಗಳಿಗೆ 3500 ರೂ.

ಬೆಂಗಳೂರು, ಮೇ 29 - ಕೊರೊನಾದಿಂದ ಪೋಷಕರನ್ನು ಕಳೆದುಕೊಂಡು ಅನಾಥರಾದ ಮಕ್ಕಳಿಗಾಗಿ, ರಾಜ್ಯ ಸರ್ಕಾರವು 'ಮುಖ್ಯಮಂತ್ರಿ ಬಾಲ ಸೇವಾ ಯೋಜನೆ' ರೂಪಿಸಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಸಲಹೆಯಂತೆ, ಈ ಯೋಜನೆ (2ನೇ ಪುಟಕ್ಕೆ)

|| ಶ್ರೀ ಬೆಳ್ಳಿಕಣ್ಣಯ್ಯ ಸ್ವಾಮಿ ಪ್ರಸನ್ನ ||

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ



ದಾವಣಗೆರೆ ಜಿಲ್ಲೆ ನಲ್ಕುಂದ ಗ್ರಾಮದ ವಾಸಿಗಳಾದ
**ಶ್ರೀ ಹಾಲಪ್ಪ ವಂಶಸ್ಥರು**
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 22-05-2021ನೇ ಶನಿವಾರ ಬೆಳಿಗ್ಗೆ 11:51 ಕ್ಕೆ ನಮ್ಮ ಪೂಜ್ಯ
**ಶ್ರೀಮತಿ ಹನುಮಮ್ಮನವರು**
(ದಿ|| ಶೇಜಪ್ಪನವರ ಧರ್ಮಪತ್ನಿ)
ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**'ಕೈಲಾಸ ಸಮಾರಾಧನೆ'ಯನ್ನು**
ದಿನಾಂಕ 30-05-2021ನೇ ಭಾನುವಾರ ಬೆಳಗ್ಗೆ 10.30ಕ್ಕೆ ಮೃತರ ಸ್ವಗೃಹದಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :
**ಹಾಲಪ್ಪ ವಂಶಸ್ಥರು ಹಾಗೂ ಬಂಧು-ಮಿತ್ರರು, ನಲ್ಕುಂದ.**
ಮೊಬೈಲ್ : 96065 51788, 98442 07701



|| ಶ್ರೀ ಆಂಜನೇಯ ಸ್ವಾಮಿ ಪ್ರಸನ್ನ || || ಶ್ರೀ ಉಚ್ಚಂಗೆಮ್ಮ ದೇವಿ ಪ್ರಸನ್ನ ||

## ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ

ದಾವಣಗೆರೆ ಸಿಟಿ ಬನಶಂಕರಿ ಬಡಾವಣೆ ವಾಸಿ
**ಶ್ರೀಮತಿ ಸಹನಾ ಹುಲ್ಲುಮನೆ** ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ 18.5.2021ನೇ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ನನ್ನ ಪೂಜ್ಯ ಪತಿಯವರಾದ
**ಶ್ರೀ ರಾಮಚಂದ್ರಪ್ಪ ಹೆಚ್.ಆರ್.**
ಸಹಾಯಕ ಅಭಿಯಂತರರು, ಮಹಾನಗರ ಪಾಲಿಕೆ, ದಾವಣಗೆರೆ.
ಇವರು ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
**ಕೈಲಾಸ ಸಮಾರಾಧನೆಯನ್ನು**
ದಿನಾಂಕ 30.05.2021ನೇ ಭಾನುವಾರ ಬೆಳಿಗ್ಗೆ 11.30 ಗಂಟೆಗೆ
ದಾವಣಗೆರೆ ಸಿಟಿ ಬನಶಂಕರಿ ಬಡಾವಣೆ ಮೃತರ ಸ್ವಗೃಹದಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.

*ದುಃಖತಪ್ತರು :* ಶ್ರೀಮತಿ ಸಹನಾ ಮತ್ತು ಮಕ್ಕಳು, ಮೃತರ ತಾಯಿ ಶ್ರೀಮತಿ ಶಾಂತಮ್ಮ ರಾಮಪ್ಪ ಮತ್ತು ಅಕ್ಕಂದಿರು, ತಮ್ಮಂದಿರು, ತಂಗಿ ಹಾಗೂ ಹುಲ್ಲುಮನೆ ವಂಶಸ್ಥರು ಮತ್ತು ಬಂಧು-ಮಿತ್ರರು. ಮೊ. : 9448328481, 9964466658

## ಕಂಚಿಕೆರೆ ಬಿದರಿ ರಾಜಶೇಖರ್ ನಿಧನ



ಹರಪನಹಳ್ಳಿ ತಾಲ್ಲೂಕು ಕಂಚಿಕೆರೆ ಗ್ರಾಮದ ವಾಸಿ **ಬಿದರಿ ರಾಜಶೇಖರ್** ಇವರು ದಿನಾಂಕ 29.05.2021ರ ಶನಿವಾರ ಸಂಜೆ 5 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 66 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 30.05.2021ರ ಭಾನುವಾರ ಬೆಳಿಗ್ಗೆ 8 ಗಂಟೆಗೆ ಮೃತರ ಸ್ವಗ್ರಾಮ ಹರಪನಹಳ್ಳಿ ತಾಲ್ಲೂಕು ಕಂಚಿಕೆರೆ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಲಿದೆ.

ದುಃಖತಪ್ತ ಕುಟುಂಬ ವರ್ಗ
**ಕೆ.ಬಿ.ಆರ್. ಇಂಡಸ್ಟ್ರೀಸ್ ಹಾಗೂ ಸಿಬ್ಬಂದಿ ವರ್ಗ, ದಾವಣಗೆರೆ.**
ಮೊ. : 99725 35329, 85531 84854

## ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀ ಕೆಂಗೋ ಹನುಮಂತಪ್ಪನವರು**

ಬಯಲುಸೀಮೆ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷರು, ಕಾಂಗ್ರೆಸ್‌ನ ಹಿರಿಯ ಮುಖಂಡರು,
ದಾವಣಗೆರೆ ಕುರುಬರ ಸಂಘದ ಜಿಲ್ಲಾಧ್ಯಕ್ಷರು, ನಮ್ಮ ಮಾರ್ಗದರ್ಶಕರಾಗಿದ್ದ
**ಶ್ರೀ ಕೆಂಗೋ ಹನುಮಂತಪ್ಪನವರು**
ದಿನಾಂಕ 29-5-2021ರಂದು ನಿಧನರಾಗಿದ್ದು ಅವರಿಗೆ **ಭಾವಪೂರ್ಣ ಶ್ರದ್ಧಾಂಜಲಿ.**
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಡಾ|| ಶಾಮನೂರು ಶಿವಶಂಕರಪ್ಪ**
ಮಾಜಿ ಸಚಿವರು ಹಾಗೂ ಶಾಸಕರು
ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರ

**ಎಸ್.ಎಸ್.ಮಲ್ಲಿಕಾರ್ಜುನ,**
ಮಾಜಿ ಸಚಿವರು, ಕರ್ನಾಟಕ ಸರ್ಕಾರ

**ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಗ್ರಾಮಾಂತರ ಸಮಿತಿ.**



## ಭಾವಪೂರ್ಣ ಶ್ರದ್ಧಾಂಜಲಿ

ದಿನಾಂಕ 29.05.2021ರಂದು ನಿಧನರಾದ
ಕನಕ ಪಟ್ಟಣ ಸಹಕಾರ ಬ್ಯಾಂಕ್ ಹಿರಿಯ ಸದಸ್ಯರೂ,
ದಾವಣಗೆರೆ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷರೂ, ಕರ್ನಾಟಕ ಸರ್ಕಾರದ
ಬಯಲುಸೀಮೆ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷರೂ, ಕರ್ನಾಟಕ ಪ್ರದೇಶ
ಕುರುಬರ ಸಂಘದ ನಿರ್ದೇಶಕರೂ, ಎಪಿಎಂಸಿ ಮಾಜಿ ನಿರ್ದೇಶಕರೂ,
ದಾವಣಗೆರೆ ಜಿಲ್ಲಾ ಕುರುಬ ಸಮಾಜದ ಹಿರಿಯ ಮುಖಂಡರೂ ಆಗಿದ್ದ
ಹಿರಿಯ ಮುತ್ಸದ್ಧಿ, ಸರಳ ಸಜ್ಜನಿಕೆಯ
**ಶ್ರೀ ಕೆಂಗೋ ಹನುಮಂತಪ್ಪ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಉಪಾಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ಖಜಾಂಚಿ, ನಿರ್ದೇಶಕರು ಮತ್ತು ಸದಸ್ಯರು**
**ದಾವಣಗೆರೆ ಜಿಲ್ಲಾ ಕುರುಬರ ಸಂಘ (ರಿ.)** ದಾವಣಗೆರೆ.

**ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ನಿರ್ದೇಶಕರು, ಸಿಬ್ಬಂದಿ ವರ್ಗ ಮತ್ತು ಪಿಗ್ಮಿ ಸಂಗ್ರಹಕಾರರು,**
**ಕನಕ ಪಟ್ಟಣ ಸಹಕಾರ ಬ್ಯಾಂಕ್**
ಮಂಡಿಪೇಟೆ, ದಾವಣಗೆರೆ.

## ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 29.05.2021ರಂದು ನಿಧನರಾದ
ದಾವಣಗೆರೆ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷರೂ,
ಕರ್ನಾಟಕ ಸರ್ಕಾರದ ಬಯಲುಸೀಮೆ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷರೂ,
ದಾವಣಗೆರೆ ಜಿಲ್ಲಾ ಕುರುಬ ಸಮಾಜದ ಹಿರಿಯ ಮುಖಂಡರೂ, ಆಗಿದ್ದ
**ಶ್ರೀ ಕೆಂಗೋ ಹನುಮಂತಪ್ಪ**
ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಸಹೋದರಿ : **ಶ್ರೀಮತಿ ಹನುಮಮ್ಮ ರುದ್ರಪ್ಪ ಧೂಳೇರ್ ಹಾಗೂ ಮಕ್ಕಳು, ಮತ್ತು ಧೂಳೇರ್ ವಂಶಸ್ಥರು**

## ಗುಡೇಕೋಟೆ ನಾಡ ಕಛೇರಿಗೆ ತಹಶೀಲ್ದಾರ್ ಜಗದೀಶ್ ಭೇಟಿ



**ಕೂಡ್ಲಿಗಿ**

ಕೂಡ್ಲಿಗಿ, ಮೇ 29- ತಾಲ್ಲೂಕಿನ ಅತಿ ದೊಡ್ಡ ಹೋಬಳಿಗಳಲ್ಲಿ ಒಂದಾದ ಗುಡೇಕೋಟೆ ಹೋಬಳಿ ನಾಡ ಕಛೇರಿಗೆ ತಹಶೀಲ್ದಾರ್ ಟಿ. ಜಗದೀಶ್ ಭೇಟಿ ನೀಡಿದರು. ನಂತರ ಮಾತನಾಡಿದ ತಹಶೀಲ್ದಾರರು, ನಾಡ ಕಛೇರಿಯ ಈಗಿನ ಹಳೇ ಕಟ್ಟಡ ಮಳೆ ಬಂದರೆ ಶಿಥಿಲವಾಗಿದ್ದು, ಮಳೆ ನೀರು ಬೀಳುವ ಸ್ಥಿತಿಯಲ್ಲಿದೆ. ಅತೀ ಶೀಘ್ರದಲ್ಲಿ ಹೊಸ ನಾಡ ಕಛೇರಿಗೆ ಸ್ಥಳಾಂತರಿಸಬೇಕು ನಾನು ಮುಂದಿನ ಬಾರಿ ಗುಡೇಕೋಟೆಗೆ ಭೇಟಿ ನೀಡುವುದರೊಳಗೆ ನೂತನ ಕಛೇರಿಯಲ್ಲಿ ಕಾರ್ಯ ಪ್ರಾರಂಭ ಮಾಡಿರಬೇಕೆಂದು ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ಗುಡೇಕೋಟೆ ನಾಡಕಛೇರಿಯ ಉಪತಹಶೀಲ್ದಾರ್ ಹೆಚ್.ಎಂ. ಕೊಟ್ರಮ್ಮ, ಕಂದಾಯ ನಿರೀಕ್ಷಕ ಹೆಚ್. ಹರೀಶ್, ಲೆಕ್ಕಾಧಿಕಾರಿಗಳಾದ ವೀರೇಶ್ ಬೇವೂರು, ಯಜಮಾನಪ್ಪ, ವೀರೇಶ್ ಹುರುಳಿಹಾಳ್, ಯಶವಂತ್, ಸಿದ್ಧಲಿಂಗಸ್ವಾಮಿ, ಶೋಭ, ನಾಗವೇಣಿ, ವಾಣಿ ವಾಲಿ, ವಾಣಿಶ್ರೀ, ಗ್ರಾಮ ಸಹಾಯಕರಾದ ಕೃಷ್ಣಮೂರ್ತಿ, ಸುಂದರಕೃಷ್ಣ, ಕಂಪ್ಯೂಟರ್ ಆಪರೇಟರ್‌ಗಳಾದ ಶಶಿಕಿರಣ್, ಮಹಾಂತೇಶ್, ಗುಡೇಕೋಟೆ ಗ್ರಾ.ಪಂ. ಸದಸ್ಯರಾದ ಎನ್. ಕೃಷ್ಣ, ವೆಂಕಟೇಶ್, ಬೆಳ್ಳಿಗಟ್ಟೆ ಗ್ರಾ.ಪಂ. ಸಹಾಯಕರಾದ ಮಲ್ಲೇಶ್, ಕೃಷ್ಣ, ಅಂಜಿನಪ್ಪ, ಕೊಟ್ರೇಶ್, ಮುಸ್ಟೂರಪ್ಪ, ಸಿದ್ದಪ್ಪ, ಬಸಪ್ಪ ಮತ್ತಿತರರು ಹಾಜರಿದ್ದರು.

## ಲಾಕ್‌ಡೌನ್ : ಮಕ್ಕಳಿಗೆ ರೇಷನ್ ವಿತರಣೆ



ದಾವಣಗೆರೆ, ಮೇ 29- ನಿಟ್ಟುವಳ್ಳಿಯ ಪ್ರೌಢ ಶಾಲೆಯಲ್ಲಿ ಕೊರೊನಾ ಲಾಕ್‌ಡೌನ್ ಪ್ರಯುಕ್ತ ಮಕ್ಕಳಿಗೆ ರೇಷನ್ ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಹುಲ್ಮನಿ ಗಣೇಶ್, ಹೆಚ್.ಎಂ. ಸುರೇಶ್, ಶಿಕ್ಷಕ ಜಯಪ್ಪ, ಎಸ್‌ಡಿಎಂಸಿಯ ಶಿವರುದ್ರಪ್ಪ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## ಕೊರೊನಾ ಹಿನ್ನೆಲೆ ಬೆಸ್ಕಾಂ ಲೈನ್ ಮ್ಯಾನ್ ಸಾವು



ದಾವಣಗೆರೆ, ಮೇ 29- ಕೊರೊನಾ ಹಿನ್ನೆಲೆಯಲ್ಲಿ ಬೆಸ್ಕಾಂ ಲೈನ್ ಮ್ಯಾನ್ ಚಿಕಿತ್ಸೆ ಫಲಿಸದೇ ಸಾವಿಗೀಡಾಗಿರುವ ಘಟನೆ ನಗರದಲ್ಲಿ ನಿನ್ನೆ ನಡೆದಿದೆ. ಹೊಳಲ್ಕೆರೆ ತಾಲ್ಲೂಕಿನ ಐನಹಳ್ಳಿ ಗ್ರಾಮದ ಸುರೇಶ್ ನಾಯ್ಕ್ (25) ಮೃತ ದುರ್ದೈವಿ. ಈತ ಸಂತೆಬೆನ್ನೂರು ಬೆಸ್ಕಾಂ ಲೈನ್ ಮ್ಯಾನ್ ಆಗಿ ಕಾರ್ಯನಿರ್ವಹಣೆ ಮಾಡುತ್ತಿದ್ದ. ಇದೇ ದಿನಾಂಕ 23 ರಂದು ನಗರದ ಚಿಗಟೇರಿ ಜಿಲ್ಲಾಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದರು.

ಮೃತ ಸುರೇಶ್ ನಾಯ್ಕ್ ಜು. 11, 2019 ರಂದು ವಿವಾಹವಾಗಿದ್ದ. ಪತ್ನಿ ತುಂಬು ಗರ್ಭಿಣಿಯಾಗಿದ್ದು, ಜೂನ್ 3 ರಂದು ಡೆಲಿವರಿ ದಿನಾಂಕ ನೀಡಲಾಗಿತ್ತು. ಎಂದು ಹೇಳಲಾಗಿದೆ. ಪತಿಯ ಸಾವಿನಲ್ಲಿ ತುಂಬು ಗರ್ಭಿಣಿ ಪತ್ನಿಯ ರೋಧನೆ ಮುಗಿಲು ಮುಟ್ಟಿತ್ತು.

# ವಾರದ ಎರಡು ದಿನ ದಿನಸಿ-ಮದ್ಯ ಖರೀದಿ : ಡಿಸಿ ಬೀಳಗಿ



**(1ನೇ ಪುಟದಿಂದ)** ಗೋದಾಮುಗಳಲ್ಲಿ ಇಳಿಸಲು ಮತ್ತು ಪ್ರತಿ ದಿನ ಬೆಳಿಗ್ಗೆ 6 ಗಂಟೆಯಿಂದ ಮಧ್ಯಾಹ್ನ 12 ಗಂಟೆಯ ವರೆಗೆ ವ್ಯಾಪಾರ ವಹಿವಾಟು ನಡೆಸಲು ಅನುಮತಿ ನೀಡಲಾಗಿದೆ ಎಂದವರು ಹೇಳಿದರು.

**ಆರೈಕೆ ವಿರುದ್ಧ ಕ್ರಮ :** ನಗರದ ಖಾಸಗಿ ಆಸ್ಪತ್ರೆ ಯಾದ ಆರೈಕೆಯಲ್ಲಿ ಸರ್ಕಾರದ ರೆಫರೆನ್ಸ್‌ಗೆ ಕೇವಲ 6 ಬೆಡ್ ಕೊಟ್ಟಿದ್ದಾರೆ. ಬೆಡ್ ಕೇಳಿದಾಗ ಒರಟಾದ ಉತ್ತರ ನೀಡಿದ್ದು, ಆಸ್ಪತ್ರೆಯ ವಿರುದ್ಧ ಕೆ.ಪಿ.ಎಂ.ಇ. ಕಾಯ್ದೆಯಡಿ ನೋಟಿಸ್ ಕಳಿಸಲಾಗಿದೆ. ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಹೇಳಿದರು.

**ಖಾಸಗಿಯಿಂದ 224 ಬೆಡ್ :** ಆಯುಷ್ಮಾನ್ ಭಾರತ್ - ಆರೋಗ್ಯ ಕರ್ನಾಟಕ ಯೋಜನೆಯಡಿ ಹತ್ತು ಖಾಸಗಿ ಆಸ್ಪತ್ರೆಗಳಿಂದ 224 ಬೆಡ್‌ಗಳನ್ನು ಪಡೆಯಲಾಗಿದೆ. ಎಸ್.ಎಸ್.ಐ.ಎಂ.ಎಸ್.ನಿಂದ 92 ಹಾಗೂ ಬಾಪೂಜಿ ಆಸ್ಪತ್ರೆಯಿಂದ 38 ಬೆಡ್‌ಗಳನ್ನು ಪಡೆಯಲಾಗಿದೆ ಎಂದವರು ಹೇಳಿದರು.

**ಲಸಿಕೆ ಲಭ್ಯ :** ಜಿಲ್ಲೆಯಲ್ಲಿ ರಾಜ್ಯ ಸರ್ಕಾರದಿಂದ ಪಡೆದ 11,920 ಕೋವಿಶೀಲ್ಡ್, ಕೇಂದ್ರ ಸರ್ಕಾರದಿಂದ ಪಡೆದ 7,220 ಕೋವಿಶೀಲ್ಡ್ ಹಾಗೂ 3,210 ಡೋಸ್ ಕೋವ್ಯಾಕ್ಸಿನ್ ಲಸಿಕೆ ಲಭ್ಯವಿದೆ ಎಂದರು.

**ಆಕ್ಸಿಜನ್ ಒತ್ತಡ ಕಡಿಮೆ :** ಆಕ್ಸಿಜನ್ ಬೆಡ್‌ಗಳಿಗೆ ಈ ಹಿಂದೆ ಇದ್ದ ಹಾಹಾಕಾರ ಈಗ ಕಡಿಮೆಯಾಗುತ್ತಿದೆ. ಆಕ್ಸಿಜನ್ ಕಾನ್ಸಂಟ್ರೇಟರ್‌ಗಳ ಅಳವಡಿಕೆ ಜೊತೆಗೆ, ಕೇಂದ್ರ ಸರ್ಕಾರದಿಂದ 18.5 ಕೆಎಲ್ ಆಕ್ಸಿಜನ್ ಬಂದಿರುವುದರಿಂದ ಮೂರ್ನಾಲ್ಕು ದಿನಗಳವರೆಗೆ ಯಾವುದೇ ಸಮಸ್ಯೆಯಾಗದು ಎಂದವರು ಹೇಳಿದರು.

**78 ಸಾವು :** ಜಿಲ್ಲೆಯಲ್ಲಿ ಎರಡನೇ ಅಲೆಯಲ್ಲಿ 78 ಜನರು ಕೊರೊನಾದಿಂದ ಹಾಗೂ ಕೊರೊನಾ ರೀತಿಯ ರೋಗದಿಂದ 112 ಜನರು ಸಾವನ್ನಪ್ಪಿದ್ದಾರೆ. ಜಿಲ್ಲೆಯಲ್ಲಿ 21 ಜನರು ಮ್ಯೂಕರ್‌ಮೈಕೋಸಿಸ್ ರೋಗಕ್ಕೆ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದವರು ಹೇಳಿದರು.

**ಲಸಿಕೆ ಚೀಟಿಗೆ ಕ್ರಮ :** ನಗರದ 10ನೇ ವಾರ್ಡ್‌ನಲ್ಲಿ ಕಾರ್ಪೊರೇಟರ್ ಒಬ್ಬರು ಲಸಿಕೆಗಾಗಿ ಚೀಟಿ ಕೊಟ್ಟಿದ್ದರು ಎಂಬುದು ಗಮನಕ್ಕೆ ಬಂದಿದೆ. ಈ ಬಗ್ಗೆ ನೋಟಿಸ್ ಕೊಟ್ಟು ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಜಿ.ಪಂ. ಸಿಇಒ ವಿಜಯ ಮಹಾಂತೇಶ ದಾನಮ್ಮನವರ್, ಎಸ್ಪಿ ಹನುಮಂತರಾಯ, ಅಪರ ಜಿಲ್ಲಾಧಿಕಾರಿ ಪೂಜಾರ ವೀರಮಲ್ಲಪ್ಪ, ಡಿಹೆಚ್‌ಓ ಡಾ.ನಾಗರಾಜ್, ಆರ್.ಸಿ.ಹೆಚ್. ಅಧಿಕಾರಿ ಡಾ. ಮೀನಾಕ್ಷಿ ಮತ್ತಿತರರು ಉಪಸ್ಥಿತರಿದ್ದರು.

### ಎರಡನೇ ಅಲೆಯಲ್ಲಿ 57 ಪೊಲೀಸರಿಗೆ ಸೋಂಕು

**ಜಿಲ್ಲೆಯಲ್ಲಿ ಎರಡನೇ ಕೊರೊನಾ ಅಲೆಯಲ್ಲಿ 57 ಪೊಲೀಸರಿಗೆ ಸೋಂಕು ಬಂದಿದೆ. ಪ್ರಸಕ್ತ 30 ಜನರು ಸೋಂಕಿತರಾಗಿದ್ದಾರೆ ಎಂದು ಎಸ್ಪಿ ಹನುಮಂತರಾಯ ತಿಳಿಸಿದ್ದಾರೆ. ಮೊದಲ ಅಲೆಯಲ್ಲಿ ನಾವು ನಾಲ್ವರು ಸಹೋದ್ಯೋಗಿಗಳನ್ನು ಕಳೆದುಕೊಂಡೆವು. ಲಸಿಕೆ ಕಾರಣದಿಂದಾಗಿ ಎರಡನೇ ಅಲೆಯಲ್ಲಿ ಸೋಂಕು ಬಂದರೂ ಚಿಕಿತ್ಸೆಗೆ ಹೆಚ್ಚಿನ ಸ್ಪಂದನೆ ಸಿಗುತ್ತಿದೆ ಎಂದವರು ಹೇಳಿದರು.**




### ಜೂ.5ರಿಂದ 19ರವರೆಗೆ ಮದುವೆ ನಿಷೇಧ



**ಕೊರೊನಾ ಪರಿಸ್ಥಿತಿಯ ಹಿನ್ನೆಲೆಯಲ್ಲಿ ಜೂ.5ರಿಂದ 19ರವರೆಗೆ ಜಿಲ್ಲಾದ್ಯಂತ ಮದುವೆ ಹಾಗೂ ಧಾರ್ಮಿಕ ಸಭೆ, ಸಮಾರಂಭ ಗಳನ್ನು ನಿಷೇಧಿಸಲಾ ಗಿದೆ ಎಂದು ಡಿಸಿ ಮಹಾಂತೇಶ್ ಬೀಳಗಿ ತಿಳಿಸಿದ್ದಾರೆ. ಜೂ.4ರವರೆಗೆ ಮಾತ್ರ ನಿಗದಿತ ಮದುವೆ ಕಾರ್ಯಕ್ರಮಗಳನ್ನು ನಡೆಸಲು ಸಂಬಂಧಿಸಿದ ಪ್ರಾಧಿಕಾರದಿಂದ ಅನುಮತಿ ಪಡೆಯಬಹುದು. ಮದುವೆಯಲ್ಲಿ ಗರಿಷ್ಠ 10 ಜನ ಮಾತ್ರ ಭಾಗವಹಿಸಬಹುದು. ಈ ಮದುವೆಗಳಲ್ಲಿ ಸಾರ್ವಜನಿಕರಿಗೆ ಊಟದ ವ್ಯವಸ್ಥೆ ನಿರ್ಬಂಧಿ ಸಲಾಗಿದೆ ಎಂದು ಜಿಲ್ಲಾಧಿಕಾರಿ ಹೇಳಿದ್ದಾರೆ.**

## ಹರಿಹರ : ಮುಂಜಾಗ್ರತಾ ಕ್ರಮಕ್ಕಾಗಿ ಡಿಸಿಗೆ ಶಾಸಕ ಎಸ್.ರಾಮಪ್ಪ ಆಗ್ರಹ



ಹರಿಹರ, ಮೇ 29- ಶಾಸಕ ಎಸ್. ರಾಮಪ್ಪನವರು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರನ್ನು ಜಿಲ್ಲಾ ಕಛೇರಿಯಲ್ಲಿ ಭೇಟಿ ಮಾಡಿ, ಪ್ರಸ್ತುತ ಹರಿಹರ ತಾಲ್ಲೂಕಿನಲ್ಲಿ ಕೊರೊನಾ ಸೋಂಕು ಹೆಚ್ಚಾಗುತ್ತಿದ್ದು, ಅದಕ್ಕಾಗಿ ಮುಂಜಾಗ್ರತೆಯಾಗಿ ತೆಗೆದುಕೊಳ್ಳಬೇಕಿರುವ ಕ್ರಮಗಳ ಕುರಿತು ಸುದೀರ್ಘವಾಗಿ ಚರ್ಚಿಸಿದರು.

ನಂತರ ಹರಿಹರ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಕ್ಸಿಜನ್ ಬೆಡ್‌ಗಳನ್ನು ಹೆಚ್ಚಿಸುವ ಹಾಗೂ ಮಲೇಬೆನ್ನೂರು ಸರ್ಕಾರಿ ಆಸ್ಪತ್ರೆಯಲ್ಲಿ 25 ಆಕ್ಸಿಜನ್ ಬೆಡ್‌ಗಳನ್ನು ಪ್ರಾರಂಭಿಸುವಂತೆ ಹಾಗೂ ಸರ್ಕಾರವು ಶಾಸಕರ ನಿಧಿಯಿಂದ 50 ಲಕ್ಷ ರೂ. ಮೊತ್ತದ ವೈದ್ಯಕೀಯ ಉಪಕರಣಗಳನ್ನು ಖರೀದಿಸುವಂತೆ ಸೂಚಿಸಿದ್ದು, ಸದರಿ ಮೊತ್ತದ, ಹರಿಹರ ಆಸ್ಪತ್ರೆಗೆ ಬೇಕಿರುವ ಪಟ್ಟಿಯನ್ನು ಈಗಾಗಲೇ ನೀಡಿದ್ದು, ಸದರಿ ಉಪಕರಣಗಳನ್ನು 2 ದಿನಗಳಲ್ಲಿ ತರಿಸಿ ಕೊಡುವಂತೆ ಕೋರಿದರು. ಇದಕ್ಕೆ ಜಿಲ್ಲಾಧಿಕಾರಿಗಳು ಸಕಾರಾತ್ಮಕವಾಗಿ ಸ್ಪಂದಿಸಿ, ಮಲೇಬೆನ್ನೂರು ಸರ್ಕಾರಿ ಆಸ್ಪತ್ರೆಗೆ 2 ರಿಂದ 3 ದಿನಗಳಲ್ಲಿ 10 ಆಕ್ಸಿಜನ್ ಕಾನ್ಸಂಟ್ರೇಲರ್‌ಗಳನ್ನು ಒದಗಿಸಿ, 10 ಆಕ್ಸಿಜನ್ ಬೆಡ್‌ಗಳನ್ನು ಪ್ರಾರಂಭಿಸುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಸೂಚಿಸಿದರು.

ಶಾಸಕರು ಸೂಚಿಸಿರುವ ವೈದ್ಯಕೀಯ ಉಪಕರಣಗಳನ್ನು 2 ದಿನಗಳಲ್ಲಿ ತರಿಸುವುದಾಗಿ ಹಾಗೂ ಭತ್ತದ ಕಟಾವು ಪ್ರಾರಂಭವಾಗಿದ್ದು, ಭತ್ತಕ್ಕೆ ಸರಿಯಾದ ಬೆಲೆ ಸಿಗದೇ ರೈತರು ಕಂಗಾಲಾಗಿರುವುದರಿಂದ, ಶೀಘ್ರವೇ ಸರ್ಕಾರವು ಬೆಂಬಲ ಬೆಲೆ ಘೋಷಿಸುವುದರೊಂದಿಗೆ, ಹರಿಹರ ಹಾಗೂ ಮಲೇಬೆನ್ನೂರಿನಲ್ಲಿ ಭತ್ತ ಖರೀದಿ ಕೇಂದ್ರಗಳನ್ನು ತೆರೆಯುವಂತೆ ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಶಾಸಕರ ಆಪ್ತ ಸಹಾಯಕ ಸಿ.ಎಂ. ಹನುಮಂತಪ್ಪ ಇತರರು ಜೊತೆಗಿದ್ದರು.

### ಕೆಂಗೋ ಹನುಮಂತಪ್ಪ ನಿಧನಕ್ಕೆ ಶಾಸಕ ರವೀಂದ್ರನಾಥ್ ಶೋಕ

ದಾವಣಗೆರೆ,ಮೇ 29- ಕುರುಬ ಸಮಾಜದ ಹಿರಿಯ ಮುಖಂಡ ಕೆಂಗೋ ಹನುಮಂತಪ್ಪ ಅವರ ನಿಧನಕ್ಕೆ ಹಿರಿಯ ಶಾಸಕ ಎಸ್.ಎ. ರವೀಂದ್ರನಾಥ್, ಬಿಜೆಪಿ ಮುಖಂಡರುಗಳಾದ ದೇವರಮನೆ ಶಿವಕುಮಾರ್, ಧನಂಜಯ್ ಕಡ್ಲೇಬಾಳು ಸಂತಾಪ ವ್ಯಕ್ತಪಡಿಸಿದ್ದಾರೆ.

## ಕೊರೊನಾ : ಹೋಮ, ಹವನ, ಪೂಜೆ



**ಹರಪನಹಳ್ಳಿ**

ಹರಪನಹಳ್ಳಿ, ಮೇ 29- ಕೊರೊನಾ ಮಹಾಮಾರಿಯನ್ನು ತೊಲಗಿಸಲು ಹೊಂಬಳಗಟ್ಟಿಯಲ್ಲಿ ಕುಟುಂಬವೊಂದು 20 ದಿನಗಳಿಂದ ಹೋಮ, ಹವನ ಕೈಗೊಂಡಿದೆ.

ಹೊಂಬಳಗಟ್ಟಿ ಗ್ರಾಮದ ವಿಶ್ವಾರಾಧ್ಯ ಮಠದಲ್ಲಿ ಸುರಪುರ ಹಿರೇಮಠದ ಹೊಳಿಬಸಯ್ಯ ಶಾಸ್ತ್ರಿಗಳು ತಮ್ಮ ಕುಟುಂಬ ಸಮೇತರಾಗಿ ಮೃತ್ಯುಂಜಯ ಹೋಮ, ಗಣ ಹೋಮ, ಧನ್ವಂತರಿ ಹೋಮ, ನವಗ್ರಹ ಹೋಮ ಹೀಗೆ ವಿವಿಧ ಹೋಮಗಳನ್ನು ಮಾಡುತ್ತಿದ್ದಾರೆ. ಶಾಸ್ತ್ರಿಗಳ ಜೊತೆ ಪತ್ನಿ, ಮೂವರು ಮಕ್ಕಳು, ಸೊಸೆ ಹಾಗೂ ಮುಖ್ಯ ಶಿಕ್ಷಕ ಮಂಜುನಾಥ ಪೂಜಾರ ಅವರು ಪಾಲ್ಗೊಳ್ಳುತ್ತಿದ್ದಾರೆ. ಪ್ರತಿದಿನ ಸಂಜೆ ಮೂರುವರೆ ತಾಸು ಹೋಮ ಮಾಡಿ ಕೊರೊನಾ ನಿರ್ಮೂಲನೆಗೆ ಪ್ರಾರ್ಥಿಸುತ್ತಿದ್ದಾರೆ. ಕೊರೊನಾ ಸೇರಿದಂತೆ ಸರ್ವ ವೈರಾಣುಗಳು ನಿರ್ಮೂಲನೆ ಆಗಿ ನಾಡಿಗೆ ಒಳ್ಳೆಯದಾಗಲಿ ಎಂದು ಈ ಹೋಮ ಕೈಗೊಂಡಿದ್ದು, ಕೊರೊನಾ ತೊಲಗುವವರೆಗೂ ಮುಂದುವರೆಯುತ್ತದೆ ಎಂದು ಅರ್ಚಕ ಹೊಳಿಬಸಯ್ಯ ಶಾಸ್ತ್ರಿ ತಿಳಿಸಿದ್ದಾರೆ.


## ಬೇಡಿಕೆ ಮೀರಿ ರೆಮ್ ಡಿಸಿವಿರ್ ಪೂರೈಕೆ

**ರಾಜ್ಯಗಳಿಗೆ ಪೂರೈಕೆ ನಿಲ್ಲಿಸಿದ ಕೇಂದ್ರ**

ನವದೆಹಲಿ, ಮೇ 29 – ದೇಶದಲ್ಲಿ ರೆಮ್ ಡಿಸಿವಿರ್ ಔಷಧದ ಪೂರೈಕೆ ಬೇಡಿಕೆಗಿಂತ ಹೆಚ್ಚಾಗಿದೆ ಎಂದು ಹೇಳಿರುವ ಕೇಂದ್ರ ಸರ್ಕಾರ, ರಾಜ್ಯಗಳಿಗೆ ಔಷಧ ಪೂರೈಸುವುದನ್ನು ನಿಲ್ಲಿಸಿದೆ.

ಈ ಬಗ್ಗೆ ಹೇಳಿಕೆ ನೀಡಿರುವ ಕೇಂದ್ರ ಸಚಿವ ಮನ್‌ಸುಖ್ ಮಾಂಡವಿಯ, ದೇಶದಲ್ಲಿ ಬೇಡಿಕೆಗಿಂತ ಹೆಚ್ಚಿನ ರೆಮ್ ಡಿಸಿವಿರ್ ಪೂರೈಕೆ ಇದೆ ಎಂದು ತಿಳಿಸಿದ್ದಾರೆ. ಏಪ್ರಿಲ್ 11ರಂದು ರೆಮ್ ಡಿಸಿವಿರ್ ಪೂರೈಕೆ ಪ್ರತಿದಿನಕ್ಕೆ 33 ಸಾವಿರ ಇತ್ತು. ಈಗ ಅದನ್ನು ದಿನಕ್ಕೆ 3.50 ಲಕ್ಷಕ್ಕೆ ಹೆಚ್ಚಿಸಲಾಗಿದೆ ಎಂದು ರಾಸಾಯನಿಕ ಹಾಗೂ ರಸಗೊಬ್ಬರ ಖಾತೆ ಅಧೀನ ಸಚಿವರಾಗಿರುವ ಮಾಂಡವೀಯ ಹೇಳಿದ್ದಾರೆ. ತಿಂಗಳ ಹಿಂದೆ 20ರಷ್ಟಿದ್ದ ರೆಮ್ ಡಿಸಿವಿರ್ ಉತ್ಪಾದನಾ ಘಟಕಗಳನ್ನು ಈಗ 60ಕ್ಕೆ ಹೆಚ್ಚಿಸಲಾಗಿದೆ ಎಂದೂ ಅವರು ತಿಳಿಸಿದ್ದಾರೆ. ತುರ್ತು ಅಗತ್ಯಕ್ಕಾಗಿ ಕೇಂದ್ರ ಸರ್ಕಾರ 50 ಲಕ್ಷ ಬಾಟಲಿಗಳ ರೆಮ್ ಡಿಸಿವಿರ್ ಔಷಧಿಯನ್ನು ದಾಸ್ತಾನಿಟ್ಟುಕೊಂಡಿದೆ ಎಂದವರು ಹೇಳಿದ್ದಾರೆ.


ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 29.05.2021ರಂದು ನಿಧನರಾದ
ಕರ್ನಾಟಕ ಸರ್ಕಾರದ ಬಯಲುಸೀಮೆ ಅಭಿವೃದ್ಧಿ ಮಂಡಳಿ ಮಾಜಿ ಅಧ್ಯಕ್ಷರೂ,
ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕರೂ,
ದಾವಣಗೆರೆ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷರೂ, ಎಪಿಎಂಸಿ ಮಾಜಿ ನಿರ್ದೇಶಕರೂ,
ದಾವಣಗೆರೆ ಜಿಲ್ಲಾ ಕುರುಬ ಸಮಾಜದ ಹಿರಿಯ ಮುಖಂಡರೂ, ಆತ್ಮೀಯರೂ ಆದ

ಶ್ರೀ ಕೆಂಗೋ ಹನುಮಂತಪ್ಪ

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಮೃತರ ಆತ್ಮಕ್ಕೆ ಚಿರಶಾಂತಿ ಸಿಗಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು
ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಎಸ್.ಎ. ರವೀಂದ್ರನಾಥ್
ಮಾಜಿ ಕೃಷಿ ಸಚಿವರು, ಹಾಲಿ ಶಾಸಕರು, ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರ.


## ಮಡಿವಾಳರನ್ನು ವಾರಿಯರ್ಸ್ ಎಂದು ಪರಿಗಣಿಸಲು ಮನವಿ



ದಾವಣಗೆರೆ, ಮೇ 29- ಜಿಲ್ಲೆಯಲ್ಲಿ ಬಟ್ಟೆ ತೊಳೆಯುವ ಕೆಲಸ ಮಾಡುವ ಮಡಿವಾಳರನ್ನು ಕೋವಿಡ್ ವಾರಿಯರ್ಸ್ ಎಂದು ಪರಿಗಣಿಸಿ, ಸೂಕ್ತ ಸೌಲಭ್ಯ ಕಲ್ಪಿಸಬೇಕೆಂದು ಜಿಲ್ಲಾ ಮಡಿವಾಳ ಮಾಚಿದೇವ ಸಂಘವು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಅವರಿಗೆ ಮನವಿ ಪತ್ರ ಸಲ್ಲಿಸಿದೆ.

ಬಟ್ಟೆಗಳನ್ನು ಶುಚಿ ಮಾಡುವುದರಿಂದ (ಮಡಿಕಟ್ಟೆ) ಧೋಬಿಘಾಟ್‌ನ ತೊಟ್ಟಿಯಲ್ಲಿ ನಿರಂತರವಾಗಿ ನಿಲ್ಲುವ ನೀರಿನಿಂದಾಗಿ ನೀರು ಕೂಡ ಮಲಿನವಾಗುತ್ತದೆ. ಇಂತಹ ಕಲ್ಮಶ ಬಟ್ಟೆಗಳನ್ನು ತೊಳೆಯುವುದರಿಂದ ಹಲವಾರು ಬ್ಯಾಕ್ಟೀರಿಯಾ ನೀರಿನಲ್ಲಿ ಸೇರಿಕೊಂಡು ನಮಗೂ ಮಹಾಮಾರಿ ರೋಗ ಅಂಟುವುದರಲ್ಲಿ ಸಂಶಯವಿಲ್ಲ. ಇದೇ ಕಾರಣಕ್ಕಾಗಿ ಪಾಲಿಕೆಯಿಂದ ಪ್ರತಿದಿನ ಧೋಬಿಘಾಟ್‌ಗೆ ಶುದ್ಧ ನೀರು ಹರಿಸುವ ಮೂಲಕ ಶುಚಿತ್ವ ಕಾಪಾಡಿಕೊಳ್ಳಲು ತಾವುಗಳು ಅನುಕೂಲ ಮಾಡಿ ಕೊಡಬೇಕು ಎಂದು ಅಳಲು ತೋಡಿಕೊಂಡರು.

ಇದಲ್ಲದೇ ತಮಗೂ ಸಹ ಜೀವ ಹಾನಿ ಆಗುವ ಸಂಭವ ಇದೆ. ಇದರಿಂದಾಗಿ ವೃತ್ತಿ ಬಾಂಧವರಿಗೆ ಸೋಂಕು ತಗುಲಿ ಆಸ್ಪತ್ರೆಗೆ ಸೇರಿದರೆ ಜಿಲ್ಲಾಡಳಿತದಿಂದಲೇ ಆಸ್ಪತ್ರೆ ವೆಚ್ಚವನ್ನು ಭರಿಸಬೇಕು.

ಆಕಸ್ಮಾತ್ ಮೃತರಾದರೆ ಸರ್ಕಾರಿ ನೌಕರರಿಗೆ ನೀಡುವ ಹಾಗೆ ಮೃತರ ಅವಲಂಬಿತ ಕುಟುಂಬಕ್ಕೆ 30 ಲಕ್ಷ ರೂ, ಪರಿಹಾರ ನೀಡಬೇಕು ಎಂದು ಕೋರಿದರು.

ಈ ವೇಳೆ ಸಂಘದ ಜಿಲ್ಲಾ ಕಾರ್ಯಾಧ್ಯಕ್ಷ ಆವರಗೆರೆ ಹೆಚ್.ಜಿ. ಉಮೇಶ್, ಉಪಾಧ್ಯಕ್ಷ ಪಿ.ಮಂಜುನಾಥ್, ಖಜಾಂಚಿ ಕೋಗುಂಡೆ ಸುರೇಶ್, ನಿರ್ದೇಶಕ, ಪತ್ರಕರ್ತ ಎಂ.ವೈ. ಸತೀಶ್, ಮಡಿಕಟ್ಟೆ ಸಂಘದ ಅಧ್ಯಕ್ಷ ಫಕ್ಕೀರಸ್ವಾಮಿ, ಸಿದ್ದೇಶ್ ಮತ್ತಿತರರು ಇದ್ದರು.

## 'ಸಿಎಂ ಬಾಲಸೇವಾ ಯೋಜನೆ'

**(1ನೇ ಪುಟದಿಂದ)** ಸರ್ಕಾರದ ಸಲಹೆ ಮೇರೆಗೆ, ಕೊರೋನಾದಿಂದ ಅನಾಥರಾಗಿ, ವಿಸ್ತೃತ ಕುಟುಂಬದ ಆಶ್ರಯದಲ್ಲಿರುವ, ಮಕ್ಕಳ ಉತ್ತಮ ಭವಿಷ್ಯ ರೂಪಿಸುವ ದೃಷ್ಟಿಯಿಂದ, ತಿಂಗಳಿಗೆ 3,500 ರೂ. ಗಳನ್ನು ನೀಡಲಾಗುವುದು.

ವಿಸ್ತೃತ ಕುಟುಂಬದ ಆಸರೆಯಿಲ್ಲದ, 10 ವರ್ಷದೊಳಗಿನ ಕೋವಿಡ್‌ನಿಂದಾಗಿ ಅನಾಥರಾಗಿರುವ ಮಕ್ಕಳ ಪೋಷಣೆ ಮತ್ತು ಉತ್ತಮ ಶಿಕ್ಷಣ ಒದಗಿಸುವ ದೃಷ್ಟಿಯಿಂದ ಅಂತಹ ಮಕ್ಕಳನ್ನು ಸರ್ಕಾರಿ ಸ್ವಾಮ್ಯದ ಮಾದರಿ ವಸತಿ ಶಾಲೆಗಳಲ್ಲಿ ದಾಖಲು ಮಾಡಿಕೊಳ್ಳಲಾಗುವುದು. 10ನೇ ತರಗತಿ ಪೂರೈಸಿದ ಮಕ್ಕಳಿಗೆ ಉಚಿತ ಲ್ಯಾಪ್ ಟಾಪ್ ನೀಡಲಾಗುವುದು.

21 ವರ್ಷ ತುಂಬಿರುವ ಹೆಣ್ಣುಮಕ್ಕಳಿಗೆ ಉನ್ನತ ಶಿಕ್ಷಣ ಸೇರಿದಂತೆ ಮುಂದಿನ ಜೀವನಕ್ಕೆ ಅನುಕೂಲ ಕಲ್ಪಿಸಲು 1 ಲಕ್ಷ ರೂ. ನೆರವು ನೀಡಲಾಗುವುದು. ರಕ್ಷಣೆಗೆ ಯಾರೂ ಇಲ್ಲದಂತಹ ಅನಾಥ ಮಕ್ಕಳನ್ನು ನೋಡಿಕೊಳ್ಳಲು ಸರ್ಕಾರದಿಂದ ಮಾರ್ಗದರ್ಶಿ/ಹಿತೈಷಿಗಳನ್ನು ನೇಮಿಸಲಾಗುವುದು. ಯೋಜನೆಯ ಸಮಗ್ರ ವಿವರಗಳನ್ನು ಶೀಘ್ರದಲ್ಲಿ ಪ್ರಕಟಿಸಲಾಗುವುದು ಎಂದು ಮುಖ್ಯಮಂತ್ರಿಗಳು ಟ್ವೀಟ್ ಮಾಡಿದ್ದಾರೆ.

## ಸರ್ಕಾರದಿಂದ ತಿಂಗಳಿಗೆ 3500 ರೂ.

**(1ನೇ ಪುಟದಿಂದ)** ರೂಪಿಸಿರುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಕುಟುಂಬ ಸದಸ್ಯರ ಆರೈಕೆಯಲ್ಲಿರುವ ಮಕ್ಕಳಿಗೆ ಮಾಸಿಕ 3,500ರೂ. ಸಹಾಯಧನ ನೀಡಲಾಗುವುದು. 10 ವರ್ಷದೊಳಗಿನ ಮಕ್ಕಳ ಆರೈಕೆಗೆ ಕುಟುಂಬದ ಸದಸ್ಯರು ಲಭ್ಯವಿಲ್ಲದಿದ್ದಲ್ಲಿ ನೋಂದಾಯಿತ ಮಕ್ಕಳ ಪಾಲನಾ ಸಂಸ್ಥೆಗೆ ದಾಖಲು ಮಾಡಿ ಆರೈಕೆ ಮಾಡಲಾಗುವುದು. ಈ ಮಕ್ಕಳಿಗೆ ಉತ್ತಮ ಗುಣಮಟ್ಟದ ಶಿಕ್ಷಣಕ್ಕೆ ಮಾದರಿ ವಸತಿ ಶಾಲೆಗಳಿಗೆ ದಾಖಲಾತಿ ಮಾಡಿಸಲಾಗುವುದು ಎಂದವರು ಹೇಳಿದ್ದಾರೆ.

10 ನೇ ತರಗತಿ ಪೂರೈಸಿದ ಮಕ್ಕಳಿಗೆ ಉನ್ನತ ಶಿಕ್ಷಣ, ಕೌಶಲ್ಯಾಭಿವೃದ್ಧಿಗೆ ಲ್ಯಾಪ್ ಟಾಪ್ ಅಥವಾ ಟ್ಯಾಬ್ ನೀಡಲಾಗುವುದು. 21 ವರ್ಷ ತುಂಬಿದ ಹೆಣ್ಣುಮಕ್ಕಳಿಗೆ ಮದುವೆ, ಉನ್ನತ ಶಿಕ್ಷಣ, ಸ್ವಯಂ ಉದ್ಯೋಗ, ಇತರೆ ಉದ್ದೇಶಗಳಿಗೆ 1 ಲಕ್ಷ ರೂ. ಸಹಾಯಧನ ನೀಡಲಾಗುವುದು. ಅನಾಥರಾದ ಮಕ್ಕಳಿಗೆ ಒಬ್ಬ ಮಾರ್ಗದರ್ಶಿ, ಹಿತೈಷಿ ನೇಮಿಸಿ ಸರ್ವತೋಮುಖ ಬೆಳವಣಿಗೆಗೆ ಸಹಾಯ ಮಾಡಲಾಗುವುದು ಎಂದು ಯಡಿಯೂರಪ್ಪ ತಿಳಿಸಿದ್ದಾರೆ.

## ಕೊರೊನಾ : ಅನಾಥರಾದ ಮಕ್ಕಳಿಗೆ ಕೇಂದ್ರದ ನೆರವು

**(1ನೇ ಪುಟದಿಂದ)** ಮಗುವಿಗೆ 18 ವರ್ಷವಾದ ನಂತರ 10 ಲಕ್ಷ ರೂ. ದೊರೆಯುವಂತೆ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಪ್ರಧಾನ ಮಂತ್ರಿ ಕಚೇರಿ ತಿಳಿಸಿದೆ.

ಮಗುವಿಗೆ 18 ವರ್ಷ ತುಂಬಿದ ನಂತರ ಈ ಹಣದಲ್ಲಿ ಮುಂದಿನ ಐದು ವರ್ಷಗಳ ಕಾಲ ಅಗತ್ಯ ನೆರವು ಕಲ್ಪಿಸಲಾಗುವುದು. 23 ವರ್ಷ ತುಂಬಿದ ನಂತರ ಎಲ್ಲಾ ಹಣವನ್ನು ಇಡಿಗಂಟಾಗಿ ವೈಯಕ್ತಿಕ ಹಾಗೂ ವೃತ್ತಿಪರ ಬಳಕೆಗೆ ನೀಡಲಾಗುವುದು.

ಮಕ್ಕಳು ದೇಶದ ಭವಿಷ್ಯ ಎಂದಿರುವ ಪ್ರಧಾನಿ, ಮಕ್ಕಳ ರಕ್ಷಣೆಗೆ ಎಲ್ಲ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು. ಅವರನ್ನು ಬಲಿಷ್ಠ ನಾಗರಿಕರನ್ನಾಗಿ ಮಾಡಿ ಉಜ್ವಲ ಭವಿಷ್ಯ ರೂಪಿಸಲಾಗುವುದು ಎಂದಿದ್ದಾರೆ.

ಹತ್ತು ವರ್ಷದೊಳಗಿನ ಮಕ್ಕಳಿಗೆ ಹತ್ತಿರದ ಕೇಂದ್ರೀಯ ವಿದ್ಯಾಲಯ ಇಲ್ಲವೇ ಖಾಸಗಿ ಶಾಲೆಯೊಂದರಲ್ಲಿ ಪ್ರವೇಶ ನೀಡಲಾಗುವುದು ಎಂದು ಪ್ರಧಾನ ಮಂತ್ರಿ ಕಚೇರಿ ತಿಳಿಸಿದೆ.

11ರಿಂದ 18 ವರ್ಷದವರಿಗೆ ಯಾವುದಾದರೂ ಕೇಂದ್ರೀಯ ವಸತಿ ಶಾಲೆಯಲ್ಲಿ ಪ್ರವೇಶ ನೀಡಲಾಗುವುದು. ಮಗು ತನ್ನ ಪಾಲಕರ ಇಲ್ಲವೇ ವಿಸ್ತೃತ ಕುಟುಂಬದವರ ಜೊತೆ ಇರಲು ಬಯಸಿದರೆ, ಅವರಿಗೆ ಹತ್ತಿರದ ಕೇಂದ್ರೀಯ ವಿದ್ಯಾಲಯ ಇಲ್ಲವೇ ಖಾಸಗಿ ಶಾಲೆಯಲ್ಲಿ ಪ್ರವೇಶ ನೀಡಲಾಗುವುದು.

ಮಗುವನ್ನು ಖಾಸಗಿ ಶಾಲೆಗೆ ದಾಖಲಿಸಿದರೆ ಶಿಕ್ಷಣ ಹಕ್ಕು ಕಾಯ್ದೆಯಡಿ ನೆರವು ಕಲ್ಪಿಸಲಾಗುವುದು. ಸರ್ಕಾರವೇ ಮಗುವಿನ ಸಮವಸ್ತ್ರ ಹಾಗೂ ಪುಸ್ತಕಗಳ ವೆಚ್ಚ ಭರಿಸಲಿದೆ.

ಉನ್ನತ ಶಿಕ್ಷಣದ ಹಂತದಲ್ಲಿ ಶೈಕ್ಷಣಿಕ ಸಾಲ ಒದಗಿಸಲಾಗುವುದು. ಈ ಸಾಲದ ಬಡ್ಡಿಯನ್ನು ಪಿಎಂ -ಕೇರ್ಸ್ ಮೂಲಕ ಪಾವತಿಸಲಾಗುವುದು.

ಕೇಂದ್ರ ಹಾಗೂ ರಾಜ್ಯಗಳ ಯೋಜನೆಗಳ ಅನ್ವಯ ಈ ಮಕ್ಕಳಿಗೆ ವೃತ್ತಿ ಶಿಕ್ಷಣಕ್ಕೂ ವ್ಯವಸ್ಥೆ ಮಾಡಲಾಗುವುದು. ಈ ಮಕ್ಕಳು ಆಯುಷ್ಮಾನ್ ಭಾರತ ಯೋಜನೆ ಇಲ್ಲವೇ ಪ್ರಧಾನ ಮಂತ್ರಿ ಜನ ಆರೋಗ್ಯ ಯೋಜನೆ ವ್ಯಾಪ್ತಿಗೂ ಬರಲಿದ್ದಾರೆ. 18 ವರ್ಷವಾಗುವವರೆಗೂ ಈ ಕಂತನ್ನು ಪಿಎಂ - ಕೇರ್ಸ್ ಮೂಲಕ ಪಾವತಿಸಲಾಗುವುದು.

ಪಿಎಂ - ಕೇರ್ಸ್‌ಗೆ ನೀಡಲಾದ ಉದಾರ ದಾನದ ಕಾರಣದಿಂದಾಗಿಯೇ ಈ ಯೋಜನೆ ಸಾಧ್ಯವಾಗಿದೆ ಎಂದು ಪ್ರಧಾನಿ ಮೋದಿ ತಿಳಿಸಿದ್ದಾರೆ.

ಕೊರೊನಾ ಕಾರಣದಿಂದ ದೇಶಾದ್ಯಂತ 577 ಮಕ್ಕಳು ಅನಾಥರಾಗಿದ್ದಾರೆ ಎಂದು ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಈ ವಾರದ ಆರಂಭದಲ್ಲಿ ತಿಳಿಸಿದ್ದರು.

## ಕೋವಿಡ್ ವಾರ್ ರೂಂಗೆ ಭೇಟಿ ನೀಡಿದ ಸಿದ್ದೇಶ್ವರ, ರಾಮಚಂದ್ರ



ದಾವಣಗೆರೆ, ಮೇ 29 - ಸಂಸದ ಡಾ.ಜಿ.ಎಂ.ಸಿದ್ದೇಶ್ವರ ಹಾಗೂ ಜಗಳೂರು ಕ್ಷೇತ್ರದ ಶಾಸಕ ಎಸ್.ವಿ.ರಾಮಚಂದ್ರಪ್ಪ ಅವರು ಅಧಿಕಾರಿಗಳೊಂದಿಗೆ ಜಿಲ್ಲಾಡಳಿತ ಕಚೇರಿಯಲ್ಲಿ ಸ್ಥಾಪಿಸಲಾಗಿರುವ ಕೋವಿಡ್ ವಾರ್‌ರೂಂ ಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಎಸ್ಪಿ ಹನುಮಂತರಾಯ, ಜಿ.ಪಂ. ಸಿಇಓ ಡಾ.ವಿಜಯ ಮಹಾಂತೇಶ ದಾನಮ್ಮನವರ್, ಡಿಹೆಚ್ಓ ಡಾ. ನಾಗರಾಜ್ ಉಪಸ್ಥಿತರಿದ್ದರು.

# ಗ್ರಾಮಗಳಲ್ಲಿ ಕೊರೊನಾ ಸೋಂಕು ಇಳಿಕೆ ಸಾಧ್ಯತೆ

## ಎರಡು ದಿನಗಳಿಂದ ಸಕ್ರಿಯ ಸೋಂಕಿತರಲ್ಲಿ ಇಳಿಕೆ : ಜಿಪಂ ಸಿಇಓ ದಾನಮ್ಮನವರ್



ದಾವಣಗೆರೆ, ಮೇ 29 – ಜಿಲ್ಲೆಯ ಗ್ರಾಮೀಣ ಭಾಗಗಳಲ್ಲಿ ಮೇ ತಿಂಗಳಲ್ಲಿ ತೀವ್ರಗೊಂಡಿದ್ದ ಕೊರೊನಾ ಸೋಂಕು, ಈಗ ಇಳಿಮುಖವಾಗುವ ಸಾಧ್ಯತೆ ಇದೆ ಎಂದು ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ವಿಜಯ ಮಹಾಂತೇಶ ದಾನಮ್ಮನವರ್ ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತಾನಾಡಿದ ಅವರು, ಮೇ 18ರಂದು ಗ್ರಾಮೀಣ ಭಾಗದಲ್ಲಿ 1,668 ಸಕ್ರಿಯ ಸೋಂಕಿತರಿದ್ದರು. ನಂತರ ಮೇ 26ರವರೆಗೆ ಸೋಂಕಿತರ ಸಂಖ್ಯೆ 3643ರವರೆಗೆ ತಲುಪಿತ್ತು. ಕಳೆದ ಎರಡು ದಿನಗಳಿಂದ ಇಳಿಕೆಯಾಗಿ ಈಗ 3,107ಕ್ಕೆ ತಲುಪಿದೆ. ಮುಂದಿನ ಮೂರ್ನಾಲ್ಕು ದಿನಗಳಲ್ಲಿ ಸೋಂಕು ಇಳಿಕೆ ಕುರಿತು ಸ್ಪಷ್ಟ ಚಿತ್ರಣ ಸಿಗಲಿದೆ ಎಂದು ಹೇಳಿದರು.

ಮನೆಯಲ್ಲಿ ಪ್ರತ್ಯೇಕವಾಗಿದ್ದ ಸೋಂಕಿತರನ್ನು ಕಡ್ಡಾಯವಾಗಿ ಕೋವಿಡ್ ಕೇರ್ ಸೆಂಟರ್‌ಗಳಿಗೆ ಕಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಗ್ರಾಮ ಪಂಚಾಯ್ತಿ ಕಾರ್ಯ ಪಡೆಗಳು ಉತ್ಸಾಹದಿಂದ ಕೆಲಸ ಮಾಡುತ್ತಿವೆ. ಮಾಸ್ಕ್ ಸೇರಿದಂತೆ ಕೊರೊನಾ ಶಿಷ್ಟಾಚಾರಗಳನ್ನು ಗ್ರಾಮೀಣ ಭಾಗದಲ್ಲಿ ಕಟ್ಟುನಿಟ್ಟಾಗಿ ಜಾರಿಗೆ ತರಲಾಗುತ್ತಿದೆ. ಈ ಎಲ್ಲ ಕ್ರಮಗಳು ಸೋಂಕು ಇಳಿಕೆಗೆ ನೆರವಾಗುತ್ತಿವೆ ಎಂದವರು ಹೇಳಿದರು.

ಕೆಲ ಗ್ರಾಮೀಣ ಭಾಗಗಳಲ್ಲಿ ಮೂಢನಂಬಿಕೆಯಿಂದ ಕೊರೊನಾ ನಿವಾರಣೆಗಾಗಿ ಸಾಮೂಹಿಕ ಆಚರಣೆಗಳನ್ನು ಮಾಡಬಾರದು. ಗ್ರಾಮದ ಜನರು ಒಟ್ಟಿಗೆ ಸೇರುವ ಬದಲು ವೈಯಕ್ತಿಕವಾಗಿ ಆಚರಣೆ ಮಾಡಬೇಕು ಎಂದವರು ಕಿವಿಮಾತು ಹೇಳಿದರು.

ಜಿಲ್ಲೆಯ 183 ಗ್ರಾಮಗಳಲ್ಲಿ ಈಗ ಕೊರೊನಾ ಸೋಂಕು ಪ್ರಕರಣಗಳು ದಾಖಲಾಗಿಲ್ಲ. 419 ಗ್ರಾಮಗಳಲ್ಲಿ 5ರವರೆಗೆ, 101 ಗ್ರಾಮಗಳಲ್ಲಿ 10ರವರೆಗೆ ಹಾಗೂ 74 ಗ್ರಾಮಗಳಲ್ಲಿ 74ಕ್ಕಿಂತ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಯಾವ ಗ್ರಾಮವನ್ನೂ ಕಂಟೈನ್‌ಮೆಂಟ್ ವಲಯ ಎಂದು ಪರಿಗಣಿಸಿಲ್ಲ. ಸ್ಥಳೀಯರು ಕೆಲವೆಡೆ ತಾವೇ ನಿರ್ಬಂಧಗಳನ್ನು ಹಾಕಿಕೊಂಡಿದ್ದಾರೆ ಎಂದರು.

ಜಿಲ್ಲೆಯಲ್ಲಿ 20 ಸಾವಿರದವರೆಗೆ ಜನರು ಉದ್ಯೋಗ ಖಾತ್ರಿಯಲ್ಲಿ ಭಾಗಿಯಾಗಿದ್ದರು. ಸರ್ಕಾರ ಉದ್ಯೋಗ ಖಾತ್ರಿಯಲ್ಲಿ 40-50ಕ್ಕಿಂತ ಹೆಚ್ಚು ಜನರನ್ನು ಸೇರಿಸದಂತೆ ನಿರ್ದೇಶನ ನೀಡಿತ್ತು. ಜನರೂ ಸಹ ಗುಂಪು ಕೆಲಸಗಳಿಗೆ ಒಲವು ತೋರಿಲ್ಲ. ಈಗ 2,500 ಜನರು ವೈಯಕ್ತಿಕ ಖಾತ್ರಿ ಕೆಲಸಗಳಲ್ಲಿ ತೊಡಗಿದ್ದಾರೆ ಎಂದವರು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

# ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕೆ ಏಳು ವರ್ಷ

## ಬಿಜೆಪಿಯಿಂದ 'ಸೇವಾ ಹೀ ಸಂಘಟನ್' ಸೇವಾ ಕಾರ್ಯ

ದಾವಣಗೆರೆ, ಮೇ 29- ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಮೇ 30 ರಂದು ಏಳು ವರ್ಷದ ಆಡಳಿತ ಪೂರೈಸಲಿರುವ ಹಿನ್ನೆಲೆಯಲ್ಲಿ ಕೊರೊನಾ ಸೋಂಕು ನಿಯಂತ್ರಣಕ್ಕಾಗಿ ಬಿಜೆಪಿಯಿಂದ 'ಸೇವಾ ಹೀ ಸಂಘಟನ್' ಬೂತ್ ಮಟ್ಟದಲ್ಲಿ ವಿವಿಧ ಸೇವಾ ಕಾರ್ಯ ನಡೆಸಲು ತೀರ್ಮಾನಿಸಲಾಗಿದೆ ಎಂದು ಪಕ್ಷದ ಜಿಲ್ಲಾಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ ತಿಳಿಸಿದ್ದಾರೆ.

ಮೋದಿ ನೇತೃತ್ವದ ಕೇಂದ್ರ ಸರ್ಕಾರ ಏಳು ವರ್ಷಗಳ ಕಾಲ ಯಶಸ್ವೀ ಆಡಳಿತ ಪೂರೈಸಿದ್ದು, ಕೋವಿಡ್ ಸಂಕಷ್ಟದ ಸಂದರ್ಭದಲ್ಲಿ ಜಿಲ್ಲೆಯ 2 ಸಾವಿರ ಬೂತ್‌ಗಳಲ್ಲಿ ಮಾಸ್ಕ್ ವಿತರಣೆ, ಊಟೋಪಚಾರ, ರಕ್ತದಾನ ಶಿಬಿರ, ಕಾರ್ಯಕರ್ತರಿಂದ ದೇಣಿಗೆ ಸಂಗ್ರಹಿಸಿ ತುರ್ತು ಅಗತ್ಯ ಇರುವವರಿಗೆ ಕನಿಷ್ಟ ಎರಡು ಸಾವಿರ ರೂ. ನೆರವು ನೀಡಲಾಗುವುದು ಎಂದು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ಅವರು ಹೇಳಿದರು.



ಸಂಸದರು, ಶಾಸಕರು, ರಾಜ್ಯ ಮತ್ತು ಜಿಲ್ಲಾ ಮಟ್ಟದ ಪದಾಧಿಕಾರಿಗಳು ಸೋಂಕಿತರ ಕುಟುಂಬಗಳಿಗೆ ಔಷಧಿ, ಫುಡ್ ಕಿಟ್ ಹಂಚಿಕೆ, ವಿದ್ಯಾರ್ಥಿಗಳ ಶಾಲಾ ಶುಲ್ಕ ಪಾವತಿ , ಮೊಬೈಲ್ ರಿಚಾರ್ಜ್, ಉಚಿತ ಆಂಬ್ಯುಲೆನ್ಸ್ ಸೇವೆ ಒದಗಿಸುವುದು, ಅಂತ್ಯಸಂಸ್ಕಾರಕ್ಕೆ ನೆರವು ನೀಡಲಾಗುವುದು ಎಂದರು.

ಕೇಂದ್ರ ಮತ್ತು ರಾಜ್ಯ ಸರ್ಕಾರ ಕೋವಿಡ್ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿಭಾಯಿಸುತ್ತಿದ್ದು, ಸೋಂಕು ನಿಯಂತ್ರಣಕ್ಕಾಗಿ ವಿಧಿಸಿರುವ ಲಾಕ್‌ಡೌನ್ ಸಂದರ್ಭದಲ್ಲಿ ಜನಸಾಮಾನ್ಯರಿಗೆ ತೊಂದರೆಯಾಗಬಾರದೆಂಬ ಕಾರಣಕ್ಕೆ ವಿಶೇಷ ಪ್ಯಾಕೇಜ್ ಘೋಷಿಸಿದ್ದು, ಡಿಸೆಂಬರ್ ವೇಳೆಗೆ ಪ್ರತಿಯೊಬ್ಬರಿಗೂ ಕೊರೊನಾ ಲಸಿಕೆ ನೀಡಿ, ಕೊರೊನಾ ಮುಕ್ತ ಭಾರತ ನಿರ್ಮಾಣ ಮಾಡಲು ಅಗತ್ಯ ಕ್ರಮ ಕೈಗೊಂಡಿದೆ ಎಂದರು.

ಭಾರತದ ವಿರುದ್ಧ ಕೆಲ ರಾಷ್ಟ್ರಗಳು ಪಿತೂರಿ ನಡೆಸಿರುವ ಕಾರಣಕ್ಕಾಗಿಯೇ ಶ್ರೀಲಂಕಾ, ಪಾಕಿಸ್ತಾನ, ಬಾಂಗ್ಲಾ ದೇಶದಲ್ಲಿ ಕಡಿಮೆ ಇರುವ ಕೋವಿಡ್ ಸೋಂಕಿತರ ಸಂಖ್ಯೆ ಹೆಚ್ಚಾಗಲು ಕಾರಣವಾಗಿದೆ ಎಂದು ಆರೋಪಿಸಿದ ಅವರು, ಪ್ರಧಾನಿ ನರೇಂದ್ರ ಮೋದಿ, ಬಿಜೆಪಿ ಮತ್ತು ಭಾರತವನ್ನು ಗುರಿಯಾಗಿಸಿಕೊಂಡು ಕೆಲ ರಾಷ್ಟ್ರಗಳು ದೇಶದಲ್ಲಿ ಸೋಂಕು ಹೆಚ್ಚಿಸಲು ಷಡ್ಯಂತರ ರೂಪಿಸಿವೆ ಎಂದು ಆಪಾದಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಬಿಜೆಪಿ ಪ್ರಧಾನ ಕಾರ್ಯದರ್ಶಿ ಬಿ.ಎಸ್ ಜಗದೀಶ್, ವಕ್ತಾರ ಡಿ.ಎಸ್ ಶಿವಶಂಕರ್, ಉಪಾಧ್ಯಕ್ಷ ಶ್ರೀನಿವಾಸ್ ಟಿ. ದಾಸಕರಿಯಪ್ಪ, ಮಾಧ್ಯಮ ಪ್ರಮುಖ್ ಹೆಚ್.ಪಿ. ವಿಶ್ವಾಸ್ ಸೇರಿದಂತೆ ಇತರರಿದ್ದರು.

# ಹೊನ್ನಾಳಿ ಪುರಸಭೆ ಅಭಿವೃದ್ಧಿಗೆ 17.5 ಕೋಟಿ ಹಣ ಬಿಡುಗಡೆ

ಹೊನ್ನಾಳಿ, 29- ರಾಜ್ಯ ಸರ್ಕಾರ ಕೊರೊನಾದಂತಹ ಸಂಕಷ್ಟದ ಪರಿಸ್ಥಿತಿಯಲ್ಲೂ ಕೂಡ ಹೊನ್ನಾಳಿ ಜನತೆಯ ಹಿತದೃಷ್ಟಿಯಿಂದ ಪಟ್ಟಣದ ಒಳಚರಂಡಿ ವ್ಯವಸ್ಥೆಗೆ 60 ಕೋಟಿ ರೂ. ಹಾಗೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗಾಗಿ 25 ಕೋಟಿ ಅನುದಾನ ಮಂಜೂರು ಮಾಡಿದ್ದು, ಈ ಪೈಕಿ ಮೊದಲ ಕಂತು 17.5 ಕೋಟಿ ರೂ. ಹಣ ಬಿಡುಗಡೆ ಮಾಡಿದೆ ಎಂದು ಪುರಸಭೆ ಅಧ್ಯಕ್ಷ ಕೆ.ವಿ. ಶ್ರೀಧರ್ ತಿಳಿಸಿದರು.

ಅವರು ಇಂದು ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಯನ್ನುದ್ದೇಶಿಸಿ ಮಾತನಾಡಿ, ಇದಕ್ಕಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್, ಕೊಳಚೆ ನಿರ್ಮೂಲನಾ ಮಂಡಳಿ ಅಧ್ಯಕ್ಷ ರಾಜೂಗೌಡ ಹಾಗೂ ಶಾಸಕ ಎಂ.ಪಿ.ರೇಣುಕಾ ಚಾರ್ಯ ಅವರಿಗೆ ನಗರದ ಜನತೆಯ ಪರವಾಗಿ ಪುರಸಭೆಯ ಚುನಾಯಿತ ಮಂಡಳಿ ಅಭಿನಂದನೆಗಳನ್ನು ಸಲ್ಲಿಸುತ್ತದೆ ಎಂದು ಶ್ರೀಧರ ಹೇಳಿದರು.

ಈ ಹಿಂದೆ 2009-10ರಲ್ಲಿ ಹೊನ್ನಾಳಿ ಪಟ್ಟಣದಲ್ಲಿ ಒಳಚರಂಡಿ ವ್ಯವಸ್ಥೆಗೆ 24 ಕೋಟಿ ರೂ. ಹಣ ಬಿಡುಗಡೆಯಾಗಿದ್ದು, ತುಂಗಭದ್ರಾ ನದಿಯಿಂದ ಹೊನ್ನಾಳಿ ನಗರಕ್ಕೆ ಶುದ್ಧ ಕುಡಿಯುವ ನೀರು ಪೂರೈಕೆ ಮಾಡಲು 2006-07ರಲ್ಲಿ 9 ಕೋಟಿ ರೂ. ಹಣ ಬಿಡುಗಡೆಯಾಗಿತ್ತು ಎಂದು ತಿಳಿಸಿದರು.



ಹೊನ್ನಾಳಿ ಪುರಸಭೆ ಅಧ್ಯಕ್ಷ ಕೆ.ವಿ. ಶ್ರೀಧರ್

ಪಟ್ಟಣದಲ್ಲಿನ ಪ್ರವಾಹ ಪೀಡಿತ ಪ್ರದೇಶದಲ್ಲಿನ ನಿವಾಸಿಗಳಿಗೆ ಹಾಗೂ ನಿವೇಶನ ರಹಿತ ಅರ್ಹ ಫಲಾನುಭವಿಗಳಿಗೆ ನಿವೇಶನ ನೀಡಲು ಹೊನ್ನಾಳಿ ಸಮೀಪದ ಮಲ್ಲದೇವರ ಕಟ್ಟೆ ಹತ್ತಿರ ಈಗಾಗಲೇ 10 ಎಕರೆ ಸರ್ಕಾರಿ ಜಮೀನು ಮಂಜೂರಾಗಿದ್ದು, ಇನ್ನೂ ಹೆಚ್ಚುವರಿಯಾಗಿ 20 ಎಕರೆ ಜಮೀನನ್ನು ನೀಡಲು ತಹಶೀಲ್ದಾರ್‌ರವರಿಗೆ ನಿರ್ದೇಶನ ನೀಡಲಾಗಿದೆ. ಒಟ್ಟು 30 ಎಕರೆ ಜಮೀನಿನಲ್ಲಿ ಆಶ್ರಯ ಮನೆ ಯೋಜನೆಯಡಿ ನಿವೇಶಗಳನ್ನು ಅಭಿವೃದ್ಧಿ ಪಡಿಸಿ ಫಲಾನುಭವಿಗಳಿಗೆ ವಿತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಪಟ್ಟಣದಲ್ಲಿ ಸುಂದರವಾದ ನೂತನ ಪ್ರವಾಸಿ ಮಂದಿರ ನಿರ್ಮಾಣಕ್ಕಾಗಿ 4 ಕೋಟಿ ರೂ. ಅನುದಾನಕ್ಕೆ ಮಂಜೂರಾತಿ ದೊರೆತಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಪುರಸಭೆ ಸದಸ್ಯರಾದ ಬಾಬೂ ಹೋಬಳದಾರ್, ರಂಗಪ್ಪ, ಗುಂಡಾ ಚಂದ್ರು, ಮುಖಂಡರಾದ ಇಂಚರ ಮಂಜು, ಕೋಳಿ ಸತೀಶ್, ಮಹೇಶ್ ಹುಡೇದ್ ಇದ್ದರು.

# ಕರುಣಾದಿಂದ ಮನೆ ಕೆಲಸದವರಿಗೆ ಕಿಟ್

ದಾವಣಗೆರೆ, ಮೇ 29- ಕರುಣಾ ಜೀವ ಕಲ್ಯಾಣ ಟ್ರಸ್ಟಿನ ವತಿಯಿಂದ ಪ್ರಸ್ತುತ ಕೋವಿಡ್‌ನಿಂದಾಗಿ ಸಂಕಷ್ಟದಲ್ಲಿರುವ ಮನೆಕೆಲಸ ಮಾಡುವ ಹೆಣ್ಣು ಮಕ್ಕಳಿಗೆ, ಬಾಡಿಗೆ ಆಟೋ ಓಡಿಸುವ ಡ್ರೈವರ್‌ಗಳಿಗೆ, ಕೂಲಿ ಮಾಡುವವರಿಗೆ ಒಟ್ಟು 100 ರೇಷನ್ ಕಿಟ್‌ಗಳನ್ನು ವಿತರಿಸಲಾಯಿತು.

ಇನ್ನೂ 400 ಕಿಟ್‌ಗಳನ್ನು ವಿತರಿಸುವ ಉದ್ದೇಶವನ್ನು ಕರುಣಾ ಟ್ರಸ್ಟ್ ಹೊಂದಿದೆ. ಈ ಉತ್ತಮ ಕಾರ್ಯವೆಸಗಲು ದಾನವಿತ್ತು ಸಹಕರಿಸಿದ ಸಹೃದಯ ದಾನಿಗಳಿಗೆ ಟ್ರಸ್ಟ್

ವಿತರಣಾ ಸಮಯದಲ್ಲಿ ಶಿವನಕೆರೆ ಬಸವಲಿಂಗಪ್ಪ ಮತ್ತು ಶ್ರೀಮತಿ ಮಂಜುಳಾ ಬಸವಲಿಂಗಪ್ಪ ಉಪಸ್ಥಿತರಿದ್ದರು.

ಒಂದು ಆಹಾರದ ಕಿಟ್‌ಗೆ ರೂ. 500 ರಂತೆ 10 ಕಿಟ್ ಗಳಿಗೆ ರೂ. 5000 ಆಗುವುದು. ಈ ಸತ್ಕಾರ್ಯಕ್ಕೆ ಧನಸಹಾಯ ಮಾಡುವವರು ವ್ಯವಸ್ಥಾಪಕ ಪಾಟೀಲ್ (6361352381) ಅಥವಾ ಸಹಾಯಕ ವ್ಯವಸ್ಥಾಪಕರಾದ ವೀಣಾ ಕೆ.ಎಂ. (9110455199)



ಅವರನ್ನು ಸಂಪರ್ಕಿಸಬಹುದು.

ಹಣವನ್ನು Karuna Jeeva Kalyana Trust, Davanagere, AC. NO. 50100332805356, IFSC HDFC 0000403, HDFC bank, Hemareddy complex, Boy's hostel Road, Davanagere ಬ್ಯಾಂಕ್ ಖಾತೆಗೂ ಜಮಾ ಮಾಡುವುದು.

# ಕೊರೊನಾ ಮುಕ್ತ ಗ್ರಾಮಗಳ ಸಂಪೂರ್ಣ ಲಾಕ್‌ಗೆ ಸೂಚನೆ

ಮಲೇಬೆನ್ನೂರು, ಮೇ 29- ಮಹಾಮಾರಿ ಕೊರೊನಾ 2ನೇ ಅಲೆಯಲ್ಲಿ ಇದುವರೆಗೂ ಒಂದೇ ಒಂದು ಪಾಸಿಟಿವ್ ಪ್ರಕರಣ ಪತ್ತೆಯಾಗದೆ ಕೊರೊನಾ ಮುಕ್ತವಾಗಿರುವ ಹರಿಹರ ತಾಲ್ಲೂಕಿನ 6 ಗ್ರಾಮಗಳನ್ನು ಸಂಪೂರ್ಣ ಲಾಕ್ ಮಾಡಿ, ಸುರಕ್ಷಿತವಾಗಿ ಇಡುವಂತೆ ತಾ.ಪಂ. ಇಒ ಗಂಗಾಧರಪ್ಪ, ಪಿಡಿಒಗಳಿಗೆ ಸೂಚನೆ ನೀಡಿದ್ದಾರೆ.

ಜಿಗಳಿ ಗ್ರಾ.ಪಂ. ವ್ಯಾಪ್ತಿಯ ವಡೆಯರ ಬಸಾಪುರ, ಕೊಕ್ಕನೂರು ಗ್ರಾ.ಪಂ. ವ್ಯಾಪ್ತಿಯ ಹಳ್ಳಿಹಾಳ್ ಕ್ಯಾಂಪ್, ಬೆಳ್ಳೂಡಿ ಗ್ರಾ.ಪಂ. ವ್ಯಾಪ್ತಿಯ ಬ್ಯಾಲದಹಳ್ಳಿ, ಹನಗವಾಡಿ ಗ್ರಾ.ಪಂ. ವ್ಯಾಪ್ತಿಯ ದೊಗ್ಗಳ್ಳಿ ಹಾಗೂ ಹರಗನಹಳ್ಳಿ ಮತ್ತು ಸಾರಥಿ ಗ್ರಾ.ಪಂ. ವ್ಯಾಪ್ತಿಯ ಕರಲಹಳ್ಳಿ ಗ್ರಾಮಗಳು ಕೊರೊನಾ ಮುಕ್ತವಾಗಿವೆ.

ಈ ಗ್ರಾಮಗಳಿಗೆ ಸಂಪರ್ಕಿಸುವ ಎಲ್ಲಾ ಮಾರ್ಗಗಳನ್ನು ಬ್ಯಾರಿಕೇಡ್‌ನಿಂದ ಸಂಪೂರ್ಣವಾಗಿ ಬಂದ್ ಮಾಡಿ, ಹೊರಗಡೆಯಿಂದ ಯಾವ ವ್ಯಕ್ತಿಗಳು ಗ್ರಾಮ ಪ್ರವೇಶಿಸದಂತೆ ನೋಡಿಕೊಳ್ಳಬೇಕು.


ಈ ಕುರಿತು ಆಯಾ ಗ್ರಾಮಗಳಲ್ಲಿ ಟಾಂ ಟಾಂ ಮೂಲಕ ಜಾಗೃತಿ ಮೂಡಿಸಿ, ಮುಂದೆಯೂ ಈ ಗ್ರಾಮಗಳಿಗೆ ಕೊರೊನಾ ಸೋಂಕು ತಗುಲದಂತೆ ನೋಡಿಕೊಳ್ಳಿ ಎಂದು ನಮಗೆ ಕಟ್ಟುನಿಟ್ಟಿನ ಆದೇಶ ಮಾಡಿದ್ದಾರೆಂದು ಜಿಗಳಿ ಗ್ರಾ.ಪಂ. ಪಿಡಿಒ ದಾಸರ ರವಿ 'ಜನತಾವಾಣಿ' ಗೆ ತಿಳಿಸಿದ್ದಾರೆ.

# ಹರಿಹರ ತಾ.ನಲ್ಲಿ 107 ಜನರಿಗೆ ಪಾಸಿಟಿವ್

ಮಲೇಬೆನ್ನೂರು, ಮೇ 29- ಇಲ್ಲಿನ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಶನಿವಾರ 22 ಜನರಿಗೆ ಕೋವಿಡ್ ಟೆಸ್ಟ್ ಮಾಡಲಾಗಿದ್ದು, 7 ಜನರಿಗೆ ಸೋಂಕು ದೃಢಪಟ್ಟಿದೆ.

ಇವತ್ತು 83 ಜನರಿಗೆ ಕೋವಿಶಿಲ್ಡ್ ಲಸಿಕೆ ಹಾಕಿದ್ದು, ಭಾನುವಾರ ಕೋವ್ಯಾಕ್ಸಿನ್ 2ನೇ ಡೋಸ್ ಲಸಿಕೆ ಮಾತ್ರ ಹಾಕಲಾಗುವುದೆಂದು ವೈದ್ಯ ಡಾ.ನಿಸಾರ್ ತಿಳಿಸಿದ್ದಾರೆ.

ಹೊಳೆಸಿರಿಗೆರೆಯ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲೂ ಶನಿವಾರ 40 ಜನರಿಗೆ ಕೋವ್ಯಾಕ್ಸಿನ್ 2ನೇ ಡೋಸ್ ಲಸಿಕೆ ಹಾಕಲಾಯಿತು. ವೈದ್ಯಾಧಿಕಾರಿ ಡಾ.ರಮೇಶ್, ತಾ.ಹಿರಿಯ ಆರೋಗ್ಯ ಸಹಾಯಕ ಎಂ.ಉಮ್ಮಣ್ಣ, ಕಿರಿಯ ಮಹಿಳಾ ಆರೋಗ್ಯ ಸಹಾಯಕಿಯರಾದ ಆಶಾರಾಣಿ, ಸವಿತಾ ಹಾಜರಿದ್ದರು.



**ಮಲೇಬೆನ್ನೂರಿನಲ್ಲಿ ಇಂದು ಕೋವ್ಯಾಕ್ಸಿನ್ ಲಸಿಕೆ**

ಹರಿಹರ ತಾಲ್ಲೂಕಿನಲ್ಲಿ ಶನಿವಾರ ಬೆಳಗಿನ ವರದಿ ಪ್ರಕಾರ 107 ಜನರ ಟೆಸ್ಟ್ ರಿಪೋರ್ಟ್ ಪಾಸಿಟಿವ್ ಬಂದಿದೆ. ಸಂಜೆ ವೇಳೆಗೆ 223 ರ್‍ಯಾಪಿಡ್ ಟೆಸ್ಟ್‌ಗೆ 29 ಜನರಿಗೆ ಸೋಂಕು ಕಾಣಿಸಿಕೊಂಡಿದೆ.

ನಾಡ ಕಚೇರಿಯಲ್ಲಿ ಆಶಾ ಕಾರ್ಯಕರ್ತರಿಗೆ ಮಾಸ್ಕ್, ಸ್ಯಾನಿಟೈಸರ್‌ಗಳನ್ನು ಉಪತಹಶೀಲ್ದಾರ್ ಆರ್.ರವಿ, ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಲೆಕ್ಕಾಧಿಕಾರಿ ಕೊಟ್ರೇಶ್ ವಿತರಿಸಿದರು.

## ಜೂ. 7ರ ನಂತರದ ಲಾಕ್‌ಡೌನ್: ಸಂಪುಟ ಸಭೆ ನಂತರ ನಿರ್ಧಾರ

ಬೆಂಗಳೂರು, ಮೇ 29- ಸದ್ಯಕ್ಕೆ ಜೂನ್ 7ರವರೆಗೆ ರಾಜ್ಯದಲ್ಲಿ ಜಾರಿಯಲ್ಲಿರುವ ಲಾಕ್‌ಡೌನ್ ವಿಸ್ತರಣೆ ಮಾಡುವ ಕುರಿತು ಮುಖ್ಯಮಂತ್ರಿ ಬಿಎಸ್ ಯಡಿಯೂರಪ್ಪ ಅವರು ಮಂತ್ರಿಮಂಡಲದ ಸದಸ್ಯರೊಂದಿಗೆ ಸಭೆ ನಡೆಸಿ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಖಾತೆ ಸಚಿವ ಬಸವರಾಜ್ ಬೊಮ್ಮಾಯಿ ತಿಳಿಸಿದರು.

ಬೆಂಗಳೂರಿನಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರ ಗೃಹ ಇಲಾಖೆಯ ಹೊಸ ಸೂಚನೆ ಹಿನ್ನೆಲೆಯಲ್ಲಿ ಮುಖ್ಯಮಂತ್ರಿಗಳು ಸಚಿವರ ಸಭೆ ನಡೆಸಲು ನಿರ್ಧರಿಸಿದ್ದಾರೆ ಎಂದರು.

ಸದ್ಯಕ್ಕೆ ಜೂನ್ 7ರವರೆಗೆ ರಾಜ್ಯದಲ್ಲಿ ಕಟ್ಟುನಿಟ್ಟಾದ ಲಾಕ್ ಡೌನ್ ಜಾರಿಯಲ್ಲಿ ಇರಲಿದೆ. ಇದರಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಆದರೆ ಕೇಂದ್ರ ಗೃಹ ಇಲಾಖೆ ಹೊರಡಿಸಿರುವ ಸುತ್ತೋಲೆಯಲ್ಲಿ ಜೂನ್ 30ರವರೆಗೆ ಬಿಗಿ ಕ್ರಮಗಳು ಇರಬೇಕು ಅಂತ ಹೇಳಿದೆ.

ಇದನ್ನು ಯಾವ ರೀತಿ ಜಾರಿ ಮಾಡಬೇಕು ಎಂಬುದರ ಕುರಿತು ಮುಖ್ಯಮಂತ್ರಿಗಳು ಸಚಿವರ ಸಭೆಯಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದು ಬೊಮ್ಮಾಯಿ ವಿವರಿಸಿದರು.

# ಬೀಜ-ಗೊಬ್ಬರ ಖರೀದಿ ಸಮಯ ವಿಸ್ತರಣೆ

ಬೆಂಗಳೂರು, ಮೇ 29- ರಾಜ್ಯದಲ್ಲಿ ಮುಂಗಾರು ಬಿತ್ತನೆ ಆರಂಭಗೊಂಡಿರುವುದರಿಂದ ರೈತರ ಕೃಷಿ ಚಟುವಟಿಕೆಗಳು ಚುರುಕುಗೊಂಡಿದ್ದು, ರಸಗೊಬ್ಬರ ಬಿತ್ತನೆ ಬೀಜ ಖರೀದಿ ರೈತರಿಗೆ ಅಗತ್ಯವಾಗಿರುವುದನ್ನು ಗಮನಿಸಿದ ಸರ್ಕಾರ ರಸಗೊಬ್ಬರ, ಬಿತ್ತನೆ ಬೀಜ ಖರೀದಿ ಸಮಯವನ್ನು ವಿಸ್ತರಿಸಿ ಆದೇಶಿಸಿದೆ.

ರಾಜ್ಯದಲ್ಲಿ ಪ್ರಸ್ತುತ ಜೂನ್ 7 ರವರೆಗೆ ಲಾಕ್ ಡೌನ್ ಜಾರಿಯಲ್ಲಿದ್ದು, ಅಗತ್ಯ ವಸ್ತುಗಳ ಖರೀದಿಗೆ ಬೆಳಿಗ್ಗೆ 6 ರಿಂದ 10 ರವರೆಗೆ ಸಮಯ ನಿಗದಿಪಡಿಸಿದ್ದು, ಕೃಷಿ ಚಟುವಟಿಕೆಗಳಿಗೆ ಸಮಯದ ನಿರ್ಬಂಧ ವಿಧಿಸಿಲ್ಲ. ಆದರೂ ಬೆಂಗಳೂರು ಸೇರಿದಂತೆ ಕೆಲವೆಡೆ ರೈತರು ರಸಗೊಬ್ಬರ ಬಿತ್ತನೆ ಬೀಜ ಖರೀದಿಗೆ ಸಮಯದ ಅಭಾವದಿಂದ ಮುಗಿಬಿದ್ದು, ಸಾಮಾಜಿಕ ಅಂತರವಿಲ್ಲದೇ ಖರೀದಿಗೆ ಮುಂದಾಗುತ್ತಿರುವುದನ್ನು ಗಮನಿಸಿದ ಕೃಷಿ ಸಚಿವ ಬಿ.ಸಿ.ಪಾಟೀಲರು ಕೃಷಿ ಇಲಾಖೆ ಹಾಗೂ ಸರ್ಕಾರದೊಂದಿಗೆ ಚರ್ಚಿಸಿ ರೈತರಿಗೆ ಅಗತ್ಯ ರಸಗೊಬ್ಬರ ಬಿತ್ತನೆ ಬೀಜ ಪೂರೈಕೆ ಖರೀದಿ ಸಮಯವನ್ನು ಬೆಳಿಗ್ಗೆ 6 ರಿಂದ ಸಂಜೆ 6 ರವರೆಗೆ ವಿಸ್ತರಿಸಲಾಗಿದೆ. ಈ ಸಂಬಂಧ ಸರ್ಕಾರ ಕೂಡ ಆದೇಶ ಹೊರಡಿಸಿದೆ

# ರಿಯಾಯಿತಿ ದರದಲ್ಲಿ ಕೆಎಸ್ಸಾರ್ಟಿಸಿ ಬಸ್ ಸೇವೆ

ಬೆಂಗಳೂರು, ಮೇ 29- ಸಾರ್ವಜನಿಕ ಹಿತದೃಷ್ಟಿಯಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಕೋವಿಡ್ ಎರಡನೇ ಅಲೆ ಸಂದರ್ಭದಲ್ಲಿ ಗ್ರಾಮೀಣ ಭಾಗದಲ್ಲಿ ಸಾರ್ವಜನಿಕರಿಗೆ ಕೋವಿಡ್ ಲಸಿಕೆ ನೀಡಲು ಅನುಕೂಲವಾಗುವಂತೆ ರಿಯಾಯಿತಿ ದರದಲ್ಲಿ ಬಸ್ ಸೇವೆ ಒದಗಿಸಲಿದೆ. ಆರೋಗ್ಯ ಇಲಾಖೆ ಹಾಗೂ ವಿವಿಧ ಜಿಲ್ಲಾಡಳಿತಗಳಿಂದ ಕೋವಿಡ್ ಲಸಿಕೆ ನೀಡಲು ಅನುಕೂಲವಾಗುವಂತೆ ಗ್ರಾಮ ಗಳಿಗೆ ತೆರಳಲು ಬಸ್ ಒದಗಿಸುವಂತೆ ಬೇಡಿಕೆ ಬಂದಿರುವ ಹಿನ್ನೆಲೆಯಲ್ಲಿ ಕೆಎಸ್ ಆರ್ ಟಿಸಿ ರಿಯಾಯಿತಿ ದರ ನಿಗದಿ ಪಡಿಸಿದೆ.


ಈ ಸಂಬಂಧ ಕೆಎಸ್ ಆರ್ ಟಿಸಿಯ ವ್ಯವಸ್ಥಾಪಕ ನಿರ್ದೇಶಕ ಶಿವಯೋಗಿ ಕಳಸದ್ ಸುತ್ತೋಲೆ ಹೊರಡಿಸಿ 47-55 ಆಸನವುಳ್ಳ ಕರ್ನಾಟಕ ಸಾರಿಗೆ ಬಸ್ ನ ಪ್ರತಿ ಕಿ.ಮೀ.ಗೆ 39 ರೂ. ನಿಗದಿಪಡಿಸಿದ್ದಾರೆ. ಪ್ರತಿ ದಿನ ಕನಿಷ್ಠ 200 ಕಿ.ಮೀ.ಗೆ ಸಂಬಂಧಿಸಿದಂತೆ ಒಪ್ಪಂದದ ಆಧಾರದ ಮೇಲೆ ಕೋವಿಡ್ ಲಸಿಕೆಗಾಗಿ ಬಸ್ ಒದಗಿಸಲಾಗಿದೆ.

# ಆಶಾ, ಕಾರ್ಯಕರ್ತರಿಗೆ ಪರಿಹಾರ ವಿತರಿಸಿ

ಬೆಂಗಳೂರು, ಮೇ 29- ಸರ್ಕಾರ ಕೊರೊನಾ ವಾರಿಯರ್ಸ್ ಎಂದು ಪರಿಗಣಿಸಿರುವ ಮತ್ತು ಕರ್ತವ್ಯದ ವೇಳೆ ಮರಣ ಹೊಂದಿರುವ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರ ಕುಟುಂಬದವರಿಗೆ ಕೂಡಲೇ ಪರಿಹಾರ ವಿತರಿಸುವಂತೆ ವಿಧಾನಸಭೆ ವಿರೋಧ ಪಕ್ಷದ ನಾಯಕರಾದ ಸಿದ್ದರಾಮಯ್ಯ ಇಂದಿಲ್ಲಿ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಪತ್ರ ಬರೆದಿರುವ ಸಿದ್ದರಾಮಯ್ಯ ಅವರು, ಕೊರೊನಾ ವಾರಿಯರ್ಸ್‌ಗೆ ಬಾಕಿ ಉಳಿಸಿಕೊಂಡಿರುವ ವೇತನವನ್ನೂ ಕೂಡಲೇ ಬಿಡುಗಡೆ ಮಾಡುವಂತೆ ಆಗ್ರಹಿಸಿದ್ದಾರೆ.


## 'ಹುಟ್ಟಿದ ಊರು, ಮೆಚ್ಚಿದ ನೆಲಕ್ಕೆ ಕೀರ್ತಿ' ತಂದ ಇಂ|| ಜಿ.ಎನ್. ಸಿದ್ದಬಸಪ್ಪ, ಬಿಎಸ್ಸಿ, ಬಿ.ಇ., ಎಂ.ಇ.,



ದಾವಣಗೆರೆ ತಾಲ್ಲೂಕು ಮಳಲಕೆರೆ ಅಪರೂಪದ ಸಾಧಕರ ಊರು. ಸೌಹಾರ್ದ ಬದುಕಿಗೆ, ಸಹಕಾರ ಗುಣಕ್ಕೆ, ಹಿಡಿದ ಕೆಲಸವನ್ನು ಸಾಧಿಸುವ ಛಲಕ್ಕೆ, ಈ ಊರಿನ ಎಲ್ಲರ ಬದುಕು ಆದರ್ಶ ಮತ್ತು ಅನುಕರಣೀಯ. ಕರ್ನಾಟಕ ರಾಜ್ಯದ ಚೀಫ್ ಇಂಜಿನಿಯರ್ ಎಸ್. ನೀಲಕಂಠಪ್ಪ, ಹೆಸರಾಂತ ವೈದ್ಯ ಡಾ|| ಎಂ.ಜಿ. ರಾಜಶೇಖರಪ್ಪ, ಸಜ್ಜನ ರಾಜಕಾರಣಿ ಕೆ.ಆರ್. ಜಯದೇವಪ್ಪ, ಪ್ರಸಿದ್ಧ ಇಂ|| ಜಿ. ಕಲ್ಲಪ್ಪ ಸಮಸಮಾನ ಬದುಕಿ ಬಾಳಿದ ಉದಾತ್ತ ಜೀವ ಇಂ|| ಜಿ.ಎನ್. ಸಿದ್ದಬಸಪ್ಪ, ಖ್ಯಾತ ಸಿವಿಲ್ ಇಂಜಿನಿಯರ್, ಕಟ್ಟಡ ವಿನ್ಯಾಸ ತಜ್ಞ, ಕಟ್ಟಡಗಳ ನೋಂದಾಯಿತ ಸರ್ಕಾರಿ ಮೌಲ್ಯಮಾಪಕ, ಪರಿಸರ ಪ್ರೇಮಿ, ಜನಪರ ಕಳಕಳಿಯ ಸಮಾಜ ಸೇವಕ, ಪಾಲ್ ಹ್ಯಾರೀಸ್ (PHF) ಬಿರುದಾಂಕಿತ ರೊಟೇರಿಯನ್, ದಾನಿ, ಸಹೃದಯಿ ಜಿ.ಎನ್. ಸಿದ್ದಬಸಪ್ಪ ಇನ್ನಿಲ್ಲ. ದಿನಾಂಕ 15.05.2021 ರ ಶನಿವಾರ ತಡರಾತ್ರಿ ತಮ್ಮ ನಿವಾಸ 'ಗೀತಾಂಜಲಿ'ಯಲ್ಲಿ ಲಿಂಗೈಕ್ಯರಾದರು. ಸದಾ ಕಾರ್ಯತತ್ಪರರೂ, ವೃತ್ತಿ ನಿಷ್ಠರೂ, ಸಮಾಜದ ಬಗ್ಗೆ ವಿಶೇಷ ಕಾಳಜಿಯಿದ್ದ ಇಂ|| ಜಿ.ಎನ್. ಸಿದ್ದಬಸಪ್ಪ ಶಾಶ್ವತವಾದ ಮನೆಗೆ ತೆರಳಿದರು.

***ದಾವಣಗೆರೆಯಲ್ಲಿ ತಮ್ಮದೇ 'ಸಿದ್ದಬಸಪ್ಪ ಅಂಡ್ ಅಸೋಸಿಯೇಟ್ಸ್' ಮೂಲಕ ದಾವಣಗೆರೆ ಮತ್ತು ಸುತ್ತಮುತ್ತಲಿನ ಜನಸಾಮಾನ್ಯರಿಗೆ ಮನೆಗಳ ಕಟ್ಟಡ ವಿನ್ಯಾಸಕರಾಗಿ, 'ಜನರ ಕನಸಿನ ಮನೆಯ ನನಸಿನ' ಹರಿಕಾರರಾಗಿದ್ದರು. ಮಧ್ಯ ಕರ್ನಾಟಕದ ಹೃದಯ ಭಾಗವಾದ ದಾವಣಗೆರೆಯಲ್ಲಿ ಮೊತ್ತಮೊದಲ ಬಾರಿಗೆ 'ಫೋರಂ ಆಫ್ ಪ್ರಾಕ್ಟೀಸಿಂಗ್ ಆರ್ಕಿಟೆಕ್ಟ್' ಮತ್ತು 'ಸಿವಿಲ್ ಇಂಜಿನಿಯರ್ಸ್' ಸಂಸ್ಥೆಗಳ ಸಹಯೋಗದೊಂದಿಗೆ 'ಬಿಲ್ಡ್‌ಮ್ಯಾಟ್' ವಿನೂತನ ಮಾದರಿಗಳ ಕಟ್ಟಡ ವಿನ್ಯಾಸ ಪರಿಕರಗಳು, ನಿರ್ಮಾಣ ವಸ್ತುಗಳ ಬಾಳಿಕೆಯ ವಿವರಗಳುಳ್ಳ ಅಪರೂಪದ ಪ್ರದರ್ಶನವನ್ನು ಸಂಯೋಜಿಸಿದ ಸಾಹಸಿ, ಇದಕ್ಕೆ ಜನ ಸ್ಪಂದಿಸಿದ್ದು ಮೆಚ್ಚುಗೆಯ ಸಂಗತಿ.***

ಎಂಸಿಸಿ 'ಬಿ' ಬ್ಲಾಕ್‌ನಲ್ಲಿ ''ಮಕ್ಕಳ ಆಟದ ಮೈದಾನ'' ಮಾಡುವ ಔಚಿತ್ಯಪೂರ್ಣ ಕಾರ್ಯ ದಲ್ಲಿ ಅಲ್ಲಿನ ಎಲ್ಲಾ ಹಿರಿಯರು, ಕಿರಿಯರೊಡನೆ ಬೆರೆತು ಯಶಸ್ವಿಯಾದರು. ದಾವಣಗೆರೆ ಮಿಡ್‌ಟೌನ್, ರೋಟರಿ ಕ್ಲಬ್ ಸಹಚರ್ಯದಲ್ಲಿ ಸುಮಾರು 25 ವರ್ಷಗಳ ಹಿಂದೆಯೇ 'ಸಸಿ ನೆಡುವ' ಕೆಲಸಕ್ಕೆ ತೊಡಗಿ ಜನ ಮೆಚ್ಚುಗೆ ಗಳಿಸಿದರು. ದಾವಣಗೆರೆ ವಿದ್ಯಾನಗರದಲ್ಲಿ ರೋಟರಿ ಕ್ಲಬ್ ಸ್ಥಾಪನೆಗೆ ಪ್ರೇರಕ ಶಕ್ತಿಯಾಗಿ ಕೆಲಸ ನಿರ್ವಹಿಸಿದರು. ಎಂಸಿಸಿ 'ಬಿ' ಬ್ಲಾಕ್‌ನ ನಾಗರಿಕ ಹಿತರಕ್ಷಣಾ ಸಮಿತಿ ಮತ್ತು ವಿವೇಕಾನಂದ ನಗೆಕೂಟದ ಅಧ್ಯಕ್ಷರಾಗಿ ಸಾಮಾಜಿಕ ಹೊಣೆಗಾರಿಕೆ, ಜವಾಬ್ದಾರಿ ಹೊತ್ತು ಯಶಸ್ಸು ಗಳಿಸಿದರು.

ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್, ಫೋರಂ ಆಫ್ ಪ್ರಾಕ್ಟೀಸಿಂಗ್ ಆರ್ಕಿಟೆಕ್ಟ್ ಮತ್ತು ಸಿವಿಲ್ ಇಂಜಿನಿಯರ್ಸ್ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಫೆಲೋ ಆಫ್ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ (F.I.E.) ಹಾಗೂ ಫೆಲೋ ಆಫ್ ಇನ್‌ಸ್ಟಿಟ್ಯೂಟ್ ಆಫ್ ವ್ಯಾಲ್ಯೂಯರ್ಸ್(F.I.V. IND) ಆಗಿದ್ದರು.

ವೃತ್ತಿಯಲ್ಲಿ ನಿಷ್ಠೆ, ಕಟ್ಟಡ ವಿನ್ಯಾಸದಲ್ಲಿ ವಿಶೇಷ ಪರಿಶ್ರಮ ಹೊಂದಿದ್ದು, ಸಾಣೇಹಳ್ಳಿಯ ಡಾ. ಪಂಡಿತಾರಾಧ್ಯ ಶ್ರೀಗಳವರ ನೇತೃತ್ವದಲ್ಲಿ ಗ್ರೀಕ್ ಮಾದರಿಯ ಬಯಲು ರಂಗಮಂದಿರದ ನಿರ್ಮಾಣದ ಸಲಹೆಗಾರರಾಗಿ ಕೆಲಸ ನಿರ್ವಹಿಸಿದ್ದಾರೆ. ಜೆ.ಪಿ. ಡಿಸ್ಟಿಲರೀಸ್, ಬೆಂಗಳೂರು, ಕುಣಿಗಲ್, ಧಾರವಾಡದಲ್ಲಿ ಕಟ್ಟಡ ವಿನ್ಯಾಸ ಮಾಡಿ, ಎಫ್ಲುಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್‌ನ (Effluent Treatment Plant) ತಾಂತ್ರಿಕ ತಜ್ಞರಾಗಿಯೂ ಸೇವೆ ಸಲ್ಲಿಸಿದ್ದಾರೆ. ದಾವಣಗೆರೆಯ ಯು.ಬಿ.ಡಿ.ಟಿ. ಕಾಲೇಜಿನಲ್ಲಿ ಕೆಲವು ವರ್ಷ ಪ್ರಾಧ್ಯಾಪಕರಾಗಿ ನಂತರ ರಾಣೇಬೆನ್ನೂರಿನ ಲ್ಲಿರುವ ಶ್ರೀ ತರಳಬಾಳು ಜಗದ್ಗುರು ಇನ್ ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾಲೇಜಿನ ಆರಂಭಿಕ ಪ್ರಾಂಶುಪಾಲರಾಗಿ ತದನಂತರ ನಿರ್ದೇಶಕರಾಗಿಯೂ ಸೇವೆ ಸಲ್ಲಿಸಿದ್ದರು. ''ಮನೆ ಗೆದ್ದು ಮಾರು ಗೆಲ್ಲುವ'' ದಿಸೆಯಲ್ಲಿ, ತಮ್ಮ ಹುಟ್ಟೂರು ಮಳಲಕೆರೆಯಲ್ಲಿ, ತಮ್ಮ ಅಣ್ಣ ಲಿಂ|| ಇಂ|| ಜಿ. ಕಲ್ಲಪ್ಪನವರೊಂದಿಗೆ ತಮ್ಮ ಮಾತಾಪಿತೃ, ಗುಡ್ಡದಾರ ಕೆಂಚಮ್ಮ ನಂದ್ಯಪ್ಪ ಇವರ ಸ್ಮರಣಾರ್ಥ ಅಲ್ಲಿನ ಸರ್ಕಾರಿ ಪ್ರೌಢಶಾಲೆಯ ಆಟದ ಮೈದಾನದ ಸಲುವಾಗಿ ಎರಡು ಎಕರೆ ಜಮೀನನ್ನು ದಾನ ಮಾಡಿ ಕೃತಾರ್ಥರಾಗಿದ್ದಾರೆ. ಸದಾ ಹೊಸ ಚಿಂತನೆ, ಕೃಷಿ ತೋಟಗಾರಿಕೆ, ಜನಪರ ಕಳಕಳಿ ಇವರ ಮೌಲ್ಯಗಳು, ಪರಿವಾರ, ಕುಟುಂಬ, ಬಂಧು-ಬಾಂಧವರು ಅಲ್ಲದೆ ಅವರನ್ನು ಬಲ್ಲ ಎಲ್ಲರಿಗೂ ಅವರ ಬದುಕು ಆದರ್ಶವೆನಿಸಲಿ.

ADVT

# ತ್ಯಜಿಸಿ ತಂಬಾಕು - ಉಜ್ವಲವಾಗುವುದು ಬದುಕು

(4ನೇ ಪುಟದಿಂದ) ಗಳು, ಪಾರ್ಶ್ವವಾಯು, ಕ್ರಾನಿಕ್ ಅಬ್ಸ್ಟ್ರಕ್ಟಿವ್ ಪಲ್ಮನರಿ ಡಿಸೀಸ್( ಶ್ವಾಸಕೋಶದ ತೊಂದರೆ), ಶ್ವಾಸಕೋಶದ ಕ್ಯಾನ್ಸರ್ ಮತ್ತು ಬಾಯಿಯ ಕ್ಯಾನ್ಸರ್ ಹಾಗು ಪ್ಯಾನ್ ಕ್ರಿಯಾಟಿಕ್ ಕ್ಯಾನ್ಸರ್.

**ಜ್ಞಾನೇಂದ್ರಿಯಗಳ ಮೇಲಾಗುವ ದುಷ್ಪಾರಿಣಾಮಗಳು:**

1) ತಲೆ/ಮೆದುಳು : ಸ್ಟ್ರೋಕ್ ಆಗುವುದು. ಮೆದುಳಿನಲ್ಲಿನ ರಕ್ತನಾಳಗಳಲ್ಲಿ ರಕ್ತ ಹೆಪ್ಪುಗಟ್ಟುವುದು. ಇದರಿಂದ ರಕ್ತ ಸಂಚಾರವಾಗದೆ ಮೆದುಳಿನ ಆ ಭಾಗಗಳು ನಿಷ್ಕ್ರಿಯಗೊಳ್ಳುವುದು. ಮೆದುಳಿನ ಆ ಭಾಗಗಳ ಹತೋಟಿಯಲ್ಲಿದ್ದ ಕ್ರಿಯೆಗಳು ನಿಷ್ಕ್ರಿಯಗೊಳ್ಳುವವು. ನೆನಪಿನ ಸಮಸ್ಯೆಗಳು ಉಲ್ಬಣಗೊಳ್ಳುವವು.

2) ಕಣ್ಣುಗಳು : ಕಣ್ಣಿನ ಪೊರೆ ಬರುವುದು. ಧೂಮಪಾನ ಮಾಡುವಾಗ ಹೊಗೆ ನೇರವಾಗಿ ಕಣ್ಣಿಗೆ ತೊಂದರೆಯುಂಟು ಮಾಡುವುದು ಮತ್ತು ಧೂಮಪಾನದಿಂದ ಅದರಲ್ಲಿನ ರಾಸಾಯನಿಕಗಳು ಶ್ವಾಸಕೋಶದ ರಕ್ತಕ್ಕೆ ಬೆರೆತು, ರಕ್ತದ ಮುಖಾಂತರ ಕಣ್ಣಿಗೆ ತಲುಪಿ ಹಾನಿಯುಂಟು ಮಾಡುವುದು.

3) ಮೂಗು : ಮೂಗಿನಲ್ಲಿರುವ ರೋಮಗಳು ಹೊರಗಿನ ವಾತಾವರಣದಲ್ಲಿನ ಕಲ್ಮಶ ಹಾಗು ರೋಗಾಣುಗಳಿಂದ ರಕ್ಷಣೆಗಿರುತ್ತದೆ. ಆದರೆ ಧೂಮಪಾನಿಗಳಲ್ಲಿ ಈ ರೋಮಗಳು ಉಷ್ಣ ಹಾಗು ಹೊಗೆಯಿಂದ ಹಾಳಾಗುತ್ತವೆ ಮತ್ತು ಮೂಗಿನ ಒಳಗಿನ ಭಾಗ ಕೂಡ ಹಾಳಾಗುತ್ತದೆ. ಇದರಿಂದಾಗಿ ಅವರ ವಾಸನೆ ಗುರುತಿಸುವ ಸಾಮರ್ಥ್ಯ ಕ್ಷೀಣಿಸುತ್ತದೆ. ಇದಲ್ಲದೆ ಅವರು ಪದೇ ಪದೇ ವಿವಿಧ ರೀತಿಯ ರೋಗಾಣುಗಳಿಗೆ ತುತ್ತಾಗಿ ಶೀತ, ಸೈನಸೈಟೀಸ್ ತೊಂದರೆಗಳಿಂದ ಬಳಲುತ್ತಿರುತ್ತಾರೆ.

4) ಕಿವಿಗಳು : ಒಳಗಿನ ಕಿವಿಯ ರಕ್ತಸಂಚಾರ ಮಾಡುವ ನಾಳಗಳಲ್ಲಿ ರಕ್ತ ಹೆಪ್ಪುಗಟ್ಟಿ ವ್ಯಕ್ತಿಯ ಕಿವಿ ಕೇಳುವ ಸಾಮರ್ಥ್ಯ ಕಡಿಮೆಯಾಗುತ್ತದೆಯಲ್ಲದೇ ವೇಗವಾಗಿ ಶ್ರವಣ ಸಾಮರ್ಥ್ಯ ಕಳೆದುಕೊಳ್ಳುತ್ತಾರೆ. ಧೂಮಪಾನ ಮಾಡುವ ವ್ಯಕ್ತಿಗಳಲ್ಲಿ ಮಧ್ಯ ಕಿವಿಯ ಸೋಂಕು ಬರುವ ಸಾಧ್ಯತೆಗಳು ಇತರೆ ಜನರಿಗಿಂತ ಮೂರು ಪಟ್ಟು ಹೆಚ್ಚಾಗಿರುತ್ತದೆ.

5) ಬಾಯಿ : ಧೂಮಪಾನದಿಂದ ಬಾಯಿಯ ಇಡೀ ವಾತಾವರಣ ಹದಗೆಡುತ್ತದೆ. ಬಾಯಿಯ ವಿವಿಧ ಭಾಗಗಳಾದ ಹಲ್ಲು, ವಸಡು, ನಾಲಿಗೆ, ಪ್ಯಾಲೇಟ್ ( ಬಾಯಿಯ ಮೇಲ್ಭಾಗ), ಕಿರುನಾಲಿಗೆ, ಕೆನ್ನೆಯ ಮತ್ತು ತುಟಿಯ ಒಳಭಾಗಗಳು ಅಕ್ಷರಶಃ ನರಳಾಡುತ್ತಿರುತ್ತವೆ. ಆಹಾರದ ರುಚಿ ಗೊತ್ತಾಗುವುದಿಲ್ಲ. ಸಮಯ ಕಳೆದ ಹಾಗೆ ಎಲ್ಲಾ ಆಹಾರವೂ ಖಾರವೆನಿಸಲಾರಂಭಿಸುತ್ತದೆ ಮತ್ತು ಬಾಯಲ್ಲೆಲ್ಲ ನೋವುಂಟಾಗುತ್ತದೆ. ಬಾಯಿಯಲ್ಲಿ ಬಿಳಿ ಮಚ್ಚೆಗಳು ಕಂಡುಬರುತ್ತವೆ. ಬಾಯಿಯಿಂದ ಯಾವಾಗಲೂ ದುರ್ಗಂಧ ಬರುತ್ತಿರುತ್ತದೆ. ಬಾಯಿಯಲ್ಲಿ ತಂಬಾಕು-ಗುಟ್ಕಾ ಇಟ್ಟುಕೊಳ್ಳುವುದರಿಂದ ಆ ಭಾಗಗಳಲ್ಲಿ ಹುಣ್ಣುಗಳಾಗುತ್ತವೆ. ಕೆಲವೊಮ್ಮೆ ರಕ್ತಸ್ರಾವವಾಗುತ್ತದೆ. ಸಮಯ ಕಳೆದ ಹಾಗೆ ಬಾಯಿಯನ್ನು ಪೂರ್ತಿಯಾಗಿ ತೆಗೆಯಲು ಸಾಧ್ಯವಾಗದ ಹಾಗೆ ಬದಲಾವಣೆಯಾಗುತ್ತದೆ. ಬಾಯಿಯ ವಿವಿಧ ಭಾಗಗಳಲ್ಲಿ ಕ್ಯಾನ್ಸರ್ ಉಂಟಾಗಲು ತಂಬಾಕಿನ ಬಳಕೆ ಮುಖ್ಯ ಕಾರಣವಾಗಿದೆ.

ಹಲ್ಲು ಕಲೆಗಳಾಗುವುದು, ಹಳದಿ ಬಣ್ಣಕ್ಕೆ ತಿರುಗುವುದು, ಕಲ್ಮಶ ಪದರ ಬೆಳೆಯುವುದು, ಹಲ್ಲುಗಳು ಸಡಿಲಗೊಳ್ಳುವವು, ಹಲ್ಲುಗಳು ಕೊಳೆಯುವವು ಮತ್ತು ಬಿದ್ದು ಹೋಗುವವು.

- ಒಸಡುಗಳು ಸೋಂಕಿಗೆ ಒಳಗಾಗುವುದು, ಒಸಡಿನ ನೋವುಗಳು ಹಾಗು ಒಸಡಿನಿಂದ ರಕ್ತಸ್ರಾವವಾಗುವುದು.
- ನಾಲಿಗೆಗೆ ರುಚಿ ಗೊತ್ತಾಗದಿರುವುದು, ನಾಲಿಗೆಯ ಕ್ಯಾನ್ಸರ್, ಹುಣ್ಣುಗಳಾಗುವವು ಮತ್ತು ಸೋಂಕಿಗೆ ತುತ್ತಾಗುವರು.

**ತಂಬಾಕು ತ್ಯಜಿಸುವುದರಿಂದ ಆಗುವ ದೈಹಿಕ ಲಾಭಗಳು:-**

1. ಕ್ಯಾನ್ಸರ್ ಮತ್ತು ಹೃದಯರೋಗದ ಗಂಡಾಂತರ ಕಡಿಮೆಯಾಗುವುದು
2. ನಿಮ್ಮ ಪ್ರೀತಿಪಾತ್ರರು ನಿಮ್ಮಯ ಈ ದುಶ್ಚಟದಿಂದ ಅಪಾಯಕ್ಕೆ ಒಳಗಾಗುವುದಿಲ್ಲ
3. ನಿಮ್ಮ ಆರೋಗ್ಯ ಕೆಮ್ಮು ಮತ್ತು ಕಫ ಗಳಿಂದ ಮುಕ್ತವಾಗುವುದು ಮತ್ತು ಸುಧಾರಿಸುವುದು
4. ನಿಮ್ಮ ಹಲ್ಲುಗಳು ಬಿಳಿಯಾಗಿ ಮತ್ತು ಶುಚಿಯಾಗಿರುವವು
5. ನಿಮ್ಮ ಆರೋಗ್ಯ ವೃದ್ಧಿಸುವುದರ ಜೊತೆಗೆ ನಿಮ್ಮಲ್ಲಿ ಆತ್ಮವಿಶ್ವಾಸ ಹೆಚ್ಚಾಗುವುದು.

**ತಂಬಾಕು ತೊರೆಯುವುದು ಯಾವಾಗಲೂ ತಡವಲ್ಲ:-**

- ಚಿಕ್ಕ ವಯಸ್ಸಿನಲ್ಲಿಯೇ ತ್ಯಜಿಸಿದರೆ ಅಧಿಕ ಲಾಭವಾಗುವುದು.
- ಸಿಗರೇಟು, ಪಾನು ಮತ್ತು ಜರದಾ ಸುಲಭವಾಗಿ ದೊರೆಯುವಂತೆ ಇರಬಾರದು.
- ಚುಯಿಂಗ್ ಗಮ್, ಸಿಹಿ ಪೆಪ್ಪರ್ ಮೆಂಟ್ ಯಾವಾಗಲೂ ಬಾಯಿಯಲ್ಲಿರಲಿ. ಆಳವಾಗಿ ಉಸಿರು ಎಳೆದುಕೊಳ್ಳುವುದನ್ನು ಅಭ್ಯಾಸ ಮಾಡಿರಿ
- ನಿಮಗೆ ಅತಿಯಾಗಿ 'ಬೇಕು' ಎನಿಸಿದಾಗ, ನಿಮ್ಮ ಮಕ್ಕಳ ಬಗ್ಗೆ ಯೋಚಿಸಿರಿ.
- ನಿಲ್ಲಿಸುವ ದಿನ ನಿರ್ಧಾರ ಮಾಡಿ. ನಿಮ್ಮ ಮಾನಸಿಕ ಬೆಂಬಲಕ್ಕೆ ಒಬ್ಬರಿರಲಿ.
- ಸಿಗರೇಟು, ಪಾನ್, ಜರದಾ ಇಲ್ಲದ ಮೊದಲ ದಿನಕ್ಕೆ ಯೋಜನೆ ಹಾಕಿಕೊಳ್ಳಿ
- ಪ್ರತಿದಿನ ವಿಶ್ರಾಂತಿಯ ತಂತ್ರಗಳಾದ ಯೋಗ, ನಡೆಯುವುದು, ಧ್ಯಾನ, ನೃತ್ಯ, ಸಂಗೀತ ಇತ್ಯಾದಿ ಅಭ್ಯಾಸ ಮಾಡಿಕೊಳ್ಳಿ.
- ಚುರುಕಾಗಿರುವ ಆರೋಗ್ಯ ಪೂರ್ಣ ಆಹಾರಕ್ಕೆ ನಿಮ್ಮ ಮೊದಲ ಆದ್ಯತೆಯಿರಲಿ.

**ತಂಬಾಕು ನಿಷೇಧಕ್ಕಾಗಿ ಕಟ್ಟುನಿಟ್ಟಿನ ಕ್ರಮದ ಅತ್ಯಗತ್ಯ :** ಬಸ್, ರೈಲು ನಿಲ್ದಾಣ, ಚಿತ್ರಮಂದಿರ, ಸರ್ಕಾರಿ ಆಸ್ಪತ್ರೆ, ಗ್ರಂಥಾಲಯ, ಕಚೇರಿ ಸೇರಿದಂತೆ ಸಾರ್ವಜನಿಕ ಸ್ಥಳಗಳಲ್ಲಿ ಧೂಮಪಾನ ನಿಷೇಧ ಕಟ್ಟುನಿಟ್ಟಾಗಿ ಜಾರಿಯಾಗಬೇಕು. ದಂಡದ ಮೊತ್ತ ಹೆಚ್ಚಿದರೆ ಧೂಮಪಾನಿಗಳು ಸಾರ್ವಜನಿಕವಾಗಿ ಸಿಗರೇಟ್ ಸೇದುವ ಸಾಧ್ಯತೆ ಕಡಿಮೆಯಾಗುತ್ತದೆ. ನಮ್ಮ ಕಾನೂನು ಜಾರಿ ಸಂಸ್ಥೆಗಳ ವೈಫಲ್ಯದಿಂದ ತಂಬಾಕು ಉತ್ಪನ್ನಗಳ ಸೇವನೆಗೆ ಕಡಿವಾಣ ಹಾಕಲು ಆಗುತ್ತಿಲ್ಲ. ಈ ನಿಟ್ಟಿನಲ್ಲಿ ಸುಧಾರಣೆಯಾಗಬೇಕು. ಇದೆಲ್ಲಕ್ಕಿಂತ ಮಿಗಿಲಾಗಿ ತಂಬಾಕು ಸೇವನೆ ವಿರುದ್ಧ ದೊಡ್ಡ ಮಟ್ಟದ ಅರಿವು ಮೂಡಿಸಬೇಕಾಗಿದೆ.

**ಕಿವಿ ಮಾತು:**

1. ಧೂಮಪಾನ ಮಾಡದಿರಿ; ಮಾಡಲೂ ಬಿಡದಿರಿ.
2. ಧೂಮಪಾನಿಗಳೇ... ಇಂದೇ ತಂಬಾಕು ತ್ಯಜಿಸಿ, ಕುಟುಂಬಕ್ಕೆ ಆಸರೆಯಾಗಿ. ಆದಷ್ಟೂ ಬೇಗ ದಂತವೈದ್ಯರ ಸಲಹೆ ಹಾಗೂ ಸೂಕ್ತವಾದ ಚಿಕಿತ್ಸೆಯನ್ನು ಪಡೆಯಿರಿ.

## ನೇಕಾರರಿಗೆ ವಿಶೇಷ ಪ್ಯಾಕೇಜ್‌ನಲ್ಲಿ ಧನ ಸಹಾಯಕ್ಕೆ ಮನವಿ



ದಾವಣಗೆರೆ, ಮೇ 29- ಮುಖ್ಯಮಂತ್ರಿಗಳು 1250 ಕೋಟಿ ರೂ.ಗಳ ವಿಶೇಷ ಪ್ಯಾಕೇಜ್ ಘೋಷಣೆಯಲ್ಲಿ ನೇಕಾರರನ್ನು ಕಡೆಗಣಿಸಿರುವುದನ್ನು ಜಿಲ್ಲಾ ನೇಕಾರರ ಒಕ್ಕೂಟ ಖಂಡಿಸಿದೆ. ನೇಕಾರರಿಗೆ ವಿಶೇಷ ಪ್ಯಾಕೇಜ್‌ನಲ್ಲಿ ಕನಿಷ್ಟ 5 ಸಾವಿರ ರೂ. ನೀಡುವಂತೆ ಜಿಲ್ಲಾ ನೇಕಾರರ ಸಮುದಾಯಗಳ ಒಕ್ಕೂಟದ ಅಧ್ಯಕ್ಷ ಡಿ. ಬಸವರಾಜ್ ಗುಬ್ಬಿ ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ ಜವಳಿ ಸಚಿವರು ಸಹ ಈ ಕುರಿತು ಮಾತನಾಡದೇ ಇರುವುದು ನೇಕಾರರಿಗೆ ನಿರಾಶೆಯನ್ನು ಮೂಡಿಸಿದೆ. ರೈತರಂತೆ ನೇಕಾರರು ಎನ್ನುವ ಸರ್ಕಾರಗಳು, ಕೃಷಿ ಸಮ್ಮಾನ್ ಯೋಜನೆಯಡಿಯಲ್ಲಿ 6 ಸಾವಿರ ಮತ್ತು ರಾಜ್ಯ ಸರ್ಕಾರ 4 ಸಾವಿರ ರೂ.ಗಳನ್ನು ನೇರವಾಗಿ ರೈತರ ಖಾತೆಗಳಿಗೆ ಜಮಾ ಮಾಡುತ್ತದೆ. ಆದರೆ ನೇಕಾರ ಸಮ್ಮಾನ್ ಯೋಜನೆಗೆ ಕೇವಲ 2 ಸಾವಿರ ರೂಪಾಯಿಗಳನ್ನು ನಿಗದಿಗೊಳಿಸಲಾಗಿದ್ದು, ಅದು ಕೈಮಗ್ಗ ನೇಕಾರರಿಗೆ ಮಾತ್ರ ಅನ್ವಯಿಸುವಂತೆ ಯೋಜನೆಯನ್ನು ಮಾಡಿದ್ದಾರೆ. ಕೂಡಲೇ ಮುಖ್ಯಮಂತ್ರಿಗಳು, ಜವಳಿ ಸಚಿವರು ಗಮನ ಹರಿಸಿ, ನೇಕಾರರಿಗೆ ಸಹಾಯಧನ ನೀಡುವಂತೆ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಧರ್ಮರಾಜ್ ಏಕಬೋಟೆ, ಜಿಲ್ಲಾ ನೇಕಾರರ ಒಕ್ಕೂಟದ ಅಧ್ಯಕ್ಷ ಪ್ರೊ. ಎಲ್. ಸತ್ಯನಾರಾಯಣ್, ವಿ.ಪಿ. ಲಕ್ಷ್ಮೀನಾರಾಯಣ್, ಪಿ.ಜೆ. ನಾಗರಾಜ್, ಆರ್.ಎಲ್. ನಾಗಭೂಷಣ್, ಬೆನಕಲ್ಲಪ್ಪ ಬುಗುಡೇನವರ್, ವಿಠಲ್ ಅಮಾಸಿ, ಟಿ. ಅಜ್ಜೇಶಿ ಇನ್ನಿತರರು ಆಗ್ರಹಿಸಿದ್ದಾರೆ.

## ರಾಮದೇವ್ ವಿರುದ್ಧ ವೈದ್ಯರ ಪ್ರತಿಭಟನೆ

ನವದೆಹಲಿ, ಮೇ 29 – ಯೋಗ ಗುರು ಬಾಬಾ ರಾಮದೇವ್ ಅಲೋಪತಿ ಕುರಿತು ನೀಡಿದ ಹೇಳಿಕೆಯಿಂದ ಅಸಮಾಧಾನಗೊಂಡಿರುವ ನಿವಾಸಿ ವೈದ್ಯರ ಒಕ್ಕೂಟ, ಜೂನ್ 1ರಂದು ದೇಶವ್ಯಾಪಿ ಪ್ರತಿಭಟನೆ ನಡೆಸುವುದಾಗಿ ಹಾಗೂ ಕರಾಳ ದಿನ ಆಚರಿಸುವುದಾಗಿ ತಿಳಿಸಿದೆ. ರಾಮದೇವ್ ತಮ್ಮ ಹೇಳಿಕೆಗಾಗಿ ಬೇಷರತ್ತಾಗಿ ಸಾರ್ವಜನಿಕವಾಗಿ ಕ್ಷಮೆ ಯಾಚಿಸುವಂತೆಯೂ ಒಕ್ಕೂಟ ಒತ್ತಾಯಿಸಿದೆ. ಅಲೋಪತಿ ವೈದ್ಯಕೀಯ ಪದ್ಧತಿಯನ್ನು ಪ್ರಶ್ನಿಸಿದ್ದ ರಾಮದೇವ್, ಅಲೋಪತಿ ಔಷಧಿ ಸೇವಿಸಿದ ಲಕ್ಷಾಂತರ ಜನ ಸಾವನ್ನಪ್ಪಿದ್ದಾರೆ ಎಂದಿದ್ದರು.

## ಹಾಸ್ಟೆಲ್, ವಸತಿ ಶಾಲಾ ಕಾರ್ಮಿಕರಿಂದ ಆನ್‌ಲೈನ್ ಪ್ರತಿಭಟನೆ



ದಾವಣಗೆರೆ, ಮೇ 29- ವೇತನಕ್ಕಾಗಿ ಆಗ್ರಹಿಸಿ ನೂರಾರು ಹಾಸ್ಟೆಲ್ ಹಾಗೂ ವಸತಿ ಶಾಲಾ ಕಾರ್ಮಿಕರು ಮನೆಗಳಿಂದಲೇ ಆನ್‌ಲೈನ್ ಪ್ರತಿಭಟನೆ ಮಾಡಿ ಸರ್ಕಾರದ ಗಮನ ಸೆಳೆದರು.

ಪ್ರತಿಭಟನೆಯ ನಂತರ ರಾಜ್ಯ ವ್ಯಾಪಿ ಹಾಸ್ಟೆಲ್ ಹಾಗೂ ವಸತಿ ಶಾಲಾ ಕಾರ್ಮಿಕರು ಫೇಸ್‌ಬುಕ್ ಪೇಜ್‌ನಲ್ಲಿ ನಡೆದ ಪ್ರತಿಭಟನಾ ಸಭೆಯಲ್ಲಿ ಪಾಲ್ಗೊಂಡಿದ್ದರು.

ಬಹುತೇಕ ಕಾರ್ಮಿಕರು ಇಎಸ್‌ಐ ಮತ್ತು ಪಿ.ಎಫ್. ಸೌಲಭ್ಯ ದಿಂದ ವಂಚಿತ ರಾಗಿದ್ದು, ಅನೇಕ ಬಾರಿ ಸರ್ಕಾರದ ಗಮನ ಸೆಳೆದರೂ ಯಾವುದೇ ಪ್ರಯೋಜನ ವಾಗಿಲ್ಲ. ಕಳೆದ ಬಾರಿಯ ಲಾಕ್‌ಡೌನ್ ವೇಳೆ ವೇತನವನ್ನು ನೀಡಬೇಕೆಂಬ ಆರ್ಥಿಕ ಇಲಾಖೆ ಆದೇಶವಿದ್ದು, ಬಹುತೇಕ ಕಾರ್ಮಿಕ ರಿಗೆ ನೀಡಿಲ್ಲವೆಂದು ಕರ್ನಾಟಕ ರಾಜ್ಯ ಸಂಯುಕ್ತ ವಸತಿ ನಿಲಯ ಕಾರ್ಮಿಕರ ಸಂಘದ ಜಿಲ್ಲಾ ಪದಾಧಿಕಾರಿಗಳಾದ ತಿಪ್ಪೇಸ್ವಾಮಿ ಅಣಬೇರು, ಸ್ವಾಮಿ, ರಂಗಪ್ಪ ಆರೋಪಿಸಿದ್ದಾರೆ. ಈ ಕಾರ್ಮಿಕರಿಗೆ ಕೂಡಲೇ ವೇತನ ನೀಡುವಂತೆ ಆಗ್ರಹಿಸಿದ್ದಾರೆ.

## ಜಿಲ್ಲಾ ಛಲವಾದಿ ಮಹಾಸಭಾದಿಂದ ಜಾಗೃತಿ

ದಾವಣಗೆರೆ, ಮೇ 29- ಜಿಲ್ಲೆಯ ಛಲವಾದಿ ಬಂಧುಗಳು ಕೊರೊನಾ ನಿಯಮಗಳನ್ನು ಪಾಲಿಸುವಂತೆ ಜಿಲ್ಲಾ ಛಲವಾದಿ ಮಹಾಸಭಾ ಕರೆ ನೀಡಿದೆ. ಯಾರಿಗಾದರೂ ಸೋಂಕು ಕಂಡುಬಂದಲ್ಲಿ ತಕ್ಷಣವೇ ಆಸ್ಪತ್ರೆಗೆ ದಾಖಲಾಗಲು ಕೋರಿದೆ. ಒಂದು ವೇಳೆ ಆಸ್ಪತ್ರೆಯಲ್ಲಿ ಏನಾದರೂ ಸಮಸ್ಯೆಗಳಾದಲ್ಲಿ ಆಯಾ ತಾಲ್ಲೂಕು ಮುಖಂಡರನ್ನು ಸಂಪರ್ಕಿಸಿ, ಸಹಾಯ ಪಡೆಯಲು ಸೂಚಿಸಿದೆ.

ಅಲ್ಲದೆ, ಸ್ವಯಂ ಪ್ರೇರಿತರಾಗಿ ಸಹಾಯಕ್ಕಾಗಿ ಮುಂದೆ ಬಂದಿರುವ ಸಮಾಜದ ತಾಲ್ಲೂಕು ಮುಖಂಡರುಗಳನ್ನು ಸಂಪರ್ಕಿಸಲು ತಿಳಿಸಿದ್ದಾರೆ. ದಾವಣಗೆರೆ ತಾಲ್ಲೂಕು: ಬಸವನಾಳ್ ಹಾಲೇಶ್-9880568861, ನವೀನ್ ಕುಮಾರ್-9448233281, ಹರಿಹರ ತಾಲ್ಲೂಕು: ಡಾ. ಜಗನ್ನಾಥ್ - 9448166113, ರಾಘವೇಂದ್ರ ಕೊಂಡಜ್ಜಿ-7411331637, ಹೊನ್ನಾಳಿ ತಾಲ್ಲೂಕು: ಗೌರವಾಧ್ಯಕ್ಷ ಕೃಷ್ಣಮೂರ್ತಿ-9880304526, ನವೀನ್ ಬೆನಕನಹಳ್ಳಿ - 9731309439, ಚನ್ನಗಿರಿ ತಾಲ್ಲೂಕು: ಸಿ. ನಾಗರಾಜ - 9448129296, ಧರಣೇಂದ್ರ - 9844573673, ಜಗಳೂರು ತಾಲ್ಲೂಕು: ಲಕ್ಷ್ಮಣ - 9448467357, ಎನ್. ವೀರಸ್ವಾಮಿ - 9880541645 ಸಂಪರ್ಕಿಸುವಂತೆ ಜಿಲ್ಲಾಧ್ಯಕ್ಷ ಎಸ್. ಶೇಖರಪ್ಪ, ಗೌರವಾಧ್ಯಕ್ಷ ಎಸ್. ವಸಂತಪ್ಪ, ಕಾರ್ಯಾಧ್ಯಕ್ಷರು ಸಿ. ಜಯ್ಯಪ್ಪ, ಖಜಾಂಚಿ ನವೀನ್ ಕುಮಾರ್, ನಿವೃತ್ತ ಪೊಲೀಸ್ ಅಧಿಕಾರಿ ಎನ್. ರುದ್ರಮುನಿ, ನಿವೃತ್ತ ನ್ಯಾಯಾಧೀಶರಾದ ಹಾಲಪ್ಪ, ಗುತ್ತಿಗೆದಾರರಾದ ಎಸ್.ಎನ್. ಬಸವರಾಜ, ಹೆಚ್.ಬಿ. ಜಯಪ್ರಕಾಶ್, ಜಿ.ಟಿ. ತಿಮ್ಮಯ್ಯ, ಟಿ.ಎಸ್. ರಾಮಯ್ಯ ತಿಳಿಸಿದ್ದಾರೆ.

## ಶ್ರೀಶೈಲ ಜಗದ್ಗುರು ಮಹಾಪೀಠದಿಂದ ಅನ್ನದಾನ



ದಾವಣಗೆರೆ, ಮೇ 29- ಕೊರೊನಾ ಲಾಕ್‌ಡೌನ್ ಹಿನ್ನೆಲೆಯಲ್ಲಿ ಶ್ರೀಶೈಲ ಪೀಠದ ಜಗದ್ಗುರು ಡಾ. ಚನ್ನಸಿದ್ಧರಾಮ ಪಂಡಿತರಾಧ್ಯ ಶಿವಾಚಾರ್ಯ ಸ್ವಾಮೀಜಿ ಅಪ್ಪಣೆಯ ಮೇರೆಗೆ ಶ್ರೀಶೈಲ ಪೀಠದ ಶ್ರೀ ಜಗದ್ಗುರು ಪಂಡಿತಾರಾಧ್ಯ ಸೇವಾ ಸಮಿತಿ ವತಿಯಿಂದ ಬಡವರು, ಭಿಕ್ಷುಕರು, ಸಾಧು ಸಂತರು, ನಿರ್ಗತಿಕರು, ಕೂಲಿ ಕಾರ್ಮಿಕರಿಗೆ ಉಪಹಾರ, ಮಧ್ಯಾಹ್ನ ಅನ್ನದಾನ ಮಾಡಲಾಯಿತು.

ಶ್ರೀಶೈಲ ಮಲ್ಲಿಕಾರ್ಜುನ ಸ್ವಾಮಿಯ ದೇವಸ್ಥಾನದ ಪ್ರಧಾನ ಅರ್ಚಕರು ಹಾಗೂ ಪೀಠದ ಸಲಹಾ ಸಮಿತಿ ಸದಸ್ಯ ಭದ್ರಯ್ಯ ಸ್ವಾಮಿ, ಶ್ರೀಶೈಲ ಪೀಠದ ಮುಖ್ಯ ವ್ಯವಸ್ಥಾಪಕ ಎಂ.ಬಿ.ಮಂಜುನಾಥ ಸ್ವಾಮಿ, ಸಂಪರ್ಕಾಧಿಕಾರಿ ಕೆ.ಶ್ರೀನಿವಾಸರಾವ್ ಅವರುಗಳ ಉಪಸ್ಥಿತಿಯಲ್ಲಿ ಅನ್ನ ಪ್ರಸಾದ ಕಾರ್ಯಕ್ರಮ ನಡೆಯಿತು ಎಂದು ಮಹಾಪೀಠದ ಏಜೆಂಟ್ ಎಂ.ಎಸ್.ಬಸವರಾಜ ಸ್ವಾಮಿ ತಿಳಿಸಿದ್ದಾರೆ.

## ಜಗಳೂರು : ಕೇರ್ ಸೆಂಟರ್‌ನಲ್ಲಿ ಮಾಸ್ಕ್, ಸ್ಯಾನಿಟೈಸರ್ ವಿತರಣೆ



ಜಗಳೂರು, ಮೇ 29- ತಾಲ್ಲೂಕಿನ ಮೆದಗಿನಕೆರೆ ಹತ್ತಿರವಿ ರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿರುವ ಕೋವಿಡ್ ಕೇರ್ ಸೆಂಟರ್ ನಲ್ಲಿರುವ ಕೊರೊನಾ ಸೋಂಕಿತರಿಗೆ ಇಂದು ಬೆಳಿಗ್ಗೆ ಸಹಾ ಯಕ ನೋಡಲ್ ಅಧಿಕಾರಿ ಹಾಗೂ ಸಮಾಜ ಕಲ್ಯಾಣ ಇಲಾಖೆ ಸಹಾ ಯಕ ನಿರ್ದೇಶಕ ಡಿ. ಮಹೇಶ್ವರಪ್ಪ ಅವರು, ಜಿಲ್ಲಾಧಿಕಾರಿಗಳ ಆದೇಶದ ಪ್ರಕಾರ ಮಾಸ್ಕ್, ಸ್ಯಾನಿಟೈಸರ್ ಮತ್ತು ದಿನಪತ್ರಿಕೆಗಳನ್ನು ವಿತರಣೆ ಮಾಡಿದರು.

ನಂತರ ಮಾತನಾಡಿದ ಅವರು ಕೊರೊನಾ ಸೋಂಕಿತರು ಯಾವುದೇ ಚಿಂತೆ ಮಾಡದೆ ಆರೋಗ್ಯವಾಗಿರಬೇಕು. ಸರಿಯಾದ ಸಮಯಕ್ಕೆ ವೈದ್ಯರು ಕೊಡುವ ಔಷಧಿಯನ್ನು ತೆಗೆದುಕೊಳ್ಳಬೇಕು. ಯಾರೂ ಭಯಪಡಬಾರದು. ಮಾಸ್ಕ್ ಮತ್ತು ಸ್ಯಾನಿಟೈಸರ್ ಅನ್ನು ಎರಡು ದಿನಕ್ಕೊಮ್ಮೆ ಎಲ್ಲರಿಗೂ ನೀಡಲಾಗುವುದು ಮತ್ತು ಎಲ್ಲರಿಗೂ ಬೆಳಿಗ್ಗೆ ಶುದ್ಧ ಕುಡಿಯುವ ಬಿಸಿ ನೀರು, ತಿಂಡಿ, ಮಧ್ಯಾಹ್ನ-ರಾತ್ರಿ ಗುಣಮಟ್ಟದ ಊಟವನ್ನು ಕೊಡಲಾಗುತ್ತದೆ ಎಂದರು.

ಕೋವಿಡ್ ಸೆಂಟರ್‌ನ ಒಳಗಡೆ ಸ್ವಚ್ಛತೆ ಕಾಪಾಡಬೇಕು. ನಿಮಗೆ ಏನಾದರೂ ತೊಂದರೆ ಯಾದರೆ ನನಗೆ ಕರೆ ಮಾಡಿ. ನಿಮ್ಮ ಸೇವೆ ಮಾಡಲು ದಿನದ 24 ಗಂಟೆಯಲ್ಲಿ ನಾನು ಸಿದ್ಧ. ಎಲ್ಲರೂ ಧೈರ್ಯದಿಂದ ಗುಣಮುಖರಾಗಿ ಸೆಂಟರ್ ನಿಂದ ಹೊರಗೆ ಬರಬೇಕು ಎಂದು ಮಹೇಶ್ ತಿಳಿಸಿದರು.

## ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ಪರಿಹಾರ ನೀಡಲು ಒತ್ತಾಯ

ಮಲೇಬೆನ್ನೂರು, ಮೇ 29- ಕೊರೊನಾ ಹಿನ್ನೆಲೆಯಲ್ಲಿ ಕೊಮಾರನಹಳ್ಳಿಯ ಎಸ್. ರಂಗಪ್ಪ ಸೇರಿದಂತೆ ರಾಜ್ಯದ ಅನೇಕ ನ್ಯಾಯಬೆಲೆ ಅಂಗಡಿ ಮಾಲೀಕರು ಮೃತಪಟ್ಟಿದ್ದು, ಮೃತ ಕುಟುಂಬಗಳಿಗೆ ಸರ್ಕಾರ ಪರಿಹಾರ ನೀಡಬೇಕೆಂದು ರಾಜ್ಯ ಪಡಿತರ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ಸಾಲಕಟ್ಟೆಯ ಡಿ.ಎಂ. ಹಾಲಸ್ವಾಮಿ ಒತ್ತಾಯಿಸಿದ್ದಾರೆ.

ಎಸ್. ರಂಗಪ್ಪ ಅವರಿಗೆ ಶ್ರದ್ಧಾಂಜಲಿ ಸಭೆ ನಡೆಸಿ ಮಾತನಾಡಿದ ಹಾಲಸ್ವಾಮಿ ಅವರು, ನ್ಯಾಯಬೆಲೆ ಅಂಗಡಿ ಮಾಲೀಕರನ್ನು ಸರ್ಕಾರ ಕೊರೊನಾ ವಾರಿಯರ್ಸ್ ಎಂದು ಘೋಷಿಸಬೇಕೆಂದು ಮನವಿ ಮಾಡಿದ್ದಾರೆ.

ನ್ಯಾಯಬೆಲೆ ಅಂಗಡಿ ಮಾಲೀಕರಿಗೆ ಕೋವಿಡ್ ಲಸಿಕೆ ನೀಡಲು ಆದ್ಯತೆ ನೀಡಬೇಕೆಂದು ರಾಜ್ಯ ಪಡಿತರ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಭಾನುವಳ್ಳಿಯ ಡಿ.ಜಿ. ಶಿವಾನಂದಪ್ಪ ಆಗ್ರಹಿಸಿದ್ದಾರೆ.

ಸಂಘದ ಹರಿಹರ ತಾ. ಅಧ್ಯಕ್ಷ ಬಂಡೇರ ತಿಮ್ಮಣ್ಣ, ಕಾರ್ಯದರ್ಶಿ ಕೆ.ಎಸ್. ಮಂಜಪ್ಪ, ಗೌರವ ಸಲಹೆಗಾರರಾದ ಪಿ.ಎಸ್. ಹನುಮಂತಪ್ಪ, ತಳಸದ ಬಸವರಾಜ್ ಸೇರಿದಂತೆ ಮತ್ತಿತರರು ಈ ವೇಳೆ ಹಾಜರಿದ್ದರು.

## ಎಐಎಂಎಸ್‌ಎಸ್‌ನಿಂದ ಕರಾಳ ದಿನಾಚರಣೆ


ದಾವಣಗೆರೆ, ಮೇ 29- ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ ವತಿಯಿಂದ ಮೂರು ಕರಾಳ ಕೃಷಿ ಕಾನೂನುಗಳನ್ನು ರದ್ದುಗೊಳಿಸಿ ಎನ್ನುವ ಬೇಡಿಕೆಯೊಂದಿಗೆ ದಾವಣಗೆರೆಯಲ್ಲೂ ಕರಾಳ ದಿನಾಚರಣೆಯನ್ನು ನಡೆಸಲಾಯಿತು. ಎಐಎಂಎಸ್‌ಎಸ್ ಕಾರ್ಯಕರ್ತರು, ಬೆಂಬಲಿಗರು ಕಪ್ಪು ವಸ್ತ್ರ ಧರಿಸಿ, ಕರಾಳ ದಿನಾಚರಣೆ ಬೇಡಿಕೆಯ ಪೋಸ್ಟರ್ ಹಿಡಿದು ಪ್ರತಿಭಟಿಸಲಾಯಿತು. ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಕೆ. ಭಾರತಿ, ಸರಸ್ವತಿ, ಮಮತಾ, ಪಲ್ಲವಿ, ಸ್ಮಿತಾ ಇನ್ನಿತರರು ಭಾಗವಹಿಸಿದ್ದರು.

## ಬಿಐಇಟಿಯಲ್ಲಿ ಉಪನ್ಯಾಸ ಮಾಲಿಕೆ

ದಾವಣಗೆರೆ, ಮೇ 29- ನಗರದ ಬಿಐಇಟಿ ಜೈವಿಕ ತಂತ್ರಜ್ಞಾನ ವಿಭಾಗವು ಹಮ್ಮಿಕೊಂಡಿದ್ದ ಐದು ದಿನಗಳ ವರ್ಚ್ಯುಯಲ್ ಸರಣಿ ಉಪನ್ಯಾಸ ಮಾಲಿಕೆ- ಕೋವಿಡ್ ಎದುರು ಜೈವಿಕ ತಂತ್ರಜ್ಞಾನ ಕ್ಷೇತ್ರದಲ್ಲಿನ ಅವಕಾಶಗಳು ಮತ್ತು ಸವಾಲುಗಳು ಕಾರ್ಯಕ್ರಮದ ಸಮಾರೋಪ ಸಮಾರಂಭ ಆನ್‌ಲೈನ್ ಮುಖೇನ ನಡೆಯಿತು.

ಅತಿಥಿಗಳಾಗಿ ಡಾ. ಶಶಿಕುಮಾರ್, ಹಿರಿಯ ವಿಜ್ಞಾನಿ, ಡಿಎಸ್‌ಐಆರ್, ನವದೆಹಲಿ ಇವರು ಭಾಗವಹಿಸಿದ್ದರು. ಗೌರವ ಅತಿಥಿಗಳಾಗಿ ಪ್ರಾಚಾರ್ಯ ಡಾ. ಹೆಚ್.ಆರ್. ಅರವಿಂದ್ ಪಾಲ್ಗೊಂಡಿದ್ದರು. ಪ್ರೊ. ವೈ. ವೃಷಭೇಂದ್ರಪ್ಪ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಪ್ರೊ. ವಾಸುದೇವನಾಯಕ್, ಡಾ. ಎನ್.ಎಸ್. ಮಂಜುನಾಥ್, ಡಾ. ವಿನಯಕುಮಾರ್ ಜೈನ್, ಶೃತಿ, ಚಂದು ಕಿಶೋರ್, ಬಿಲ್ವಶ್ರೀ, ಎಂ.ಟಿ. ವಿನಯ ಉಪಸ್ಥಿತರಿದ್ದರು.


### ಭಾವಪೂರ್ಣ ಶ್ರದ್ಧಾಂಜಲಿ



ದಿ : 29-5-21ರಂದು ನಿಧನರಾದ ಕುರುಬ ಸಮಾಜದ ಮುಖಂಡರು, ಬಯಲು ಸೀಮೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷರು, ಹಿರಿಯರಾದ

**ಶ್ರೀ ಕೆಂಗೋ ಹನುಮಂತಪ್ಪ**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಎ.ಜೆ.ಮೂಡಲಗಿರಿ ಮತ್ತು ಕುಟುಂಬದವರು**
**ಎ.ಜೆ.ಪ್ರಸನ್ನಕುಮಾರ್ ಮತ್ತು ಕುಟುಂಬದವರು.**

### ಭಾವಪೂರ್ಣ ಶ್ರದ್ಧಾಂಜಲಿ




ಆನಂದಪ್ಪ ಎಸ್.ಎಲ್.
ಸ್ಲಂ ಇಂಜಿನಿಯರ್ ಇವರ ತಾಯಿಯವರಾದ

**ಶ್ರೀಮತಿ ದ್ಯಾಮಮ್ಮ**

ಇವರು ದಿನಾಂಕ 22.05.21ರಂದು ನಿಧನರಾಗಿದ್ದು, ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

+ ಸ್ಲಂ ಜನಾಂದೋಲನ ಕರ್ನಾಟಕ
+ ಸಾವಿತ್ರಿ ಬಾಪುಲೆ ಮಹಿಳಾ ಸಂಘಟನೆ ಜಿಲ್ಲಾ ಸಮಿತಿ, ದಾವಣಗೆರೆ.
+ ರೇಣುಕಾ ಹಾವೇರಿ + ಎಂ. ಶಬ್ಬೀರ್ ಸಾಬ್ + ಸಾವಿತ್ರಮ್ಮ + ಸಹೀಲ್ ಭಾಷಾ + ಬಾಲಪ್ಪ ಹಾಗೂ ಜಿಲ್ಲಾ ಸಮಿತಿಯ ಎಲ್ಲಾ ಪದಾಧಿಕಾರಿಗಳು.

### ಭಾವಪೂರ್ಣ ಶ್ರದ್ಧಾಂಜಲಿ



ವಿಶ್ವಭಾರತಿ ವಿದ್ಯಾಪೀಠ (ರಿ.)
ಕಾರ್ಯದರ್ಶಿಯಾದ

**ಕೆಂಗೋ ಹನುಮಂತಪ್ಪ**

ಇವರು, ದಿನಾಂಕ : 29.05.2021ರಂದು ನಿಧನರಾಗಿದ್ದು, ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ವಿಶ್ವಭಾರತಿ ವಿದ್ಯಾಪೀಠ (ರಿ.)**
**ಮುಖ್ಯೋಪಾಧ್ಯಾಯರು ಹಾಗೂ ಸಿಬ್ಬಂದಿ ವರ್ಗದವರು**

### ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 27.5.2021ರಂದು ನಿಧನರಾದ ನಮ್ಮೆಲ್ಲರ ಆತ್ಮೀಯ ಸ್ನೇಹಿತರಾಗಿದ್ದ

**ಐನಳ್ಳಿ ವಿಶ್ವನಾಥ್ (ವಿಶ್ವಣ್ಣ)**

ಇವರಿಗೆ ಭಾವಪೂರ್ಣ ಶ್ರದ್ಧಾಂಜಲಿ. ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಹಾಗೂ ಅವರ ಕುಟುಂಬ ವರ್ಗಕ್ಕೆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ಪ್ರಾರ್ಥಿಸುವ

★ ಅಂಗಡಿ ಎಲ್.ಟಿ. ದ್ವಾರಕನಾಥ
★ ಅಂಗಡಿ ಎಲ್.ಟಿ ಜಗನ್ನಾಥ್ ★ ಅಂಗಡಿ ಎಲ್.ಟಿ. ಗಿರಿಧರ್
★ ಅಂಗಡಿ ಲಕ್ಷ್ಮಮ್ಮನವರ ಮೊಮ್ಮಕ್ಕಳು
★ ಷಣ್ಮುಖಪ್ಪ ಗದಿಗೀಮಠ ★ ಸೋಮನಾಥಯ್ಯ ಹಿರೇಮಠ
★ ಅಮರೇಶ ಗಟ್ಟಿಗನೂರು ★ ಜಯದೀಪ್ ಐನಹಳ್ಳಿ
★ ಅರುಣಕುಮಾರ್ ಜೆ. ★ ಪ್ರಸಾದ್ ವಿ. ರಾಯ್ಕರ್
★ ಕೇವಲ್‌ಚಂದ್ ★ ಜಯರಾಜ್ ಯಮ್ಮಿ
★ ಡಿ.ಎಂ. ಸಿದ್ದಲಿಂಗೇಶ್ ★ ಶಿವರಾಜ್ ಐನಹಳ್ಳಿ
★ ಶೇಖರಪ್ಪ ಬಿ.ಪಿ. ★ ರಾಜನಹಳ್ಳಿ ಡಿ. ಬದರೀನಾಥ್

### ಭಾವಪೂರ್ಣ ಶ್ರದ್ಧಾಂಜಲಿ



**ಶ್ರೀಯುತ ಕೆಂಗೋ ಹನುಮಂತಪ್ಪನವರು**
ಚಿಕ್ಕಬೂದಿಹಾಳ್, ದಾವಣಗೆರೆ ನಿಧನ 29.05.2021

ದಿನಾಂಕ 29.05.2021ರ ಶನಿವಾರ ನಿಧನರಾದ ಕುರುಬ ಸಮಾಜದ ಹಿರಿಯ ಮುತ್ಸದ್ದಿ, ನೇರ ನಿಷ್ಠೂರವಾದಿ, ಕರ್ನಾಟಕ ಬಯಲು ಸೀಮೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷರು, ಜಿಲ್ಲಾ ಕುರುಬರ ಸಂಘದ ಜಿಲ್ಲಾಧ್ಯಕ್ಷರು, ಅಹಿಂದ ನಾಯಕರು, ನಮ್ಮ ಕುಟುಂಬದ ನಿಕಟವರ್ತಿಗಳಾಗಿದ್ದ


**ಶ್ರೀಯುತ ಕೆಂಗೋ ಹನುಮಂತಪ್ಪ**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ.
ಶ್ರೀಯುತರ ಕುಟುಂಬ ವರ್ಗಕ್ಕೆ ಭಗವಂತನು ದುಃಖ ಭರಿಸುವ ಶಕ್ತಿಯನ್ನು ನೀಡಲೆಂದು ಪ್ರಾರ್ಥಿಸುತ್ತಾ ನಿಮ್ಮ ತತ್ವ ಆದರ್ಶಗಳು ನಮಗೆಲ್ಲ ದಾರಿದೀಪವಾಗಿವೆ. ನಿಮ್ಮ ಆಶಯದಂತೆ ನಡೆಯುತ್ತೇವೆ.
ನಿಮ್ಮ ಆತ್ಮಕ್ಕೆ ಶಾಂತಿ ಸಿಗಲೆಂದು ದೇವರಲ್ಲಿ ಸದಾ ಪ್ರಾರ್ಥಿಸುತ್ತೇವೆ.

**ಹಾಲೇಕಲ್ಲು ಎಸ್.ಟಿ. ಅರವಿಂದ್ ಮತ್ತು ಸಹೋದರರು**
ಉಪಾಧ್ಯಕ್ಷರು, ಮಾಜಿ ಕಾರ್ಯದರ್ಶಿಗಳು,
ದಾವಣಗೆರೆ ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘ, ದಾವಣಗೆರೆ.

# ಭಾವಪೂರ್ಣ ಶ್ರದ್ಧಾಂಜಲಿ







## ಶ್ರೀಯುತ ಕೆಂಗೋ ಹನುಮಂತಪ್ಪನವರು

**ಚಿಕ್ಕಬೂದಿಹಾಳ್, ದಾವಣಗೆರೆ        ನಿಧನ 29.05.2021**

ದಿನಾಂಕ 29.05.2021ರ ಶನಿವಾರ ನಿಧನರಾದ ದಾವಣಗೆರೆ ಜಿಲ್ಲಾ ಕುರುಬರ ಸಂಘದ ಅಧ್ಯಕ್ಷರು, ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕರು, ಬಯಲು ಸೀಮೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷರು, ಜಿಲ್ಲೆಯ ಅಹಿಂದ ಹೋರಾಟಗಾರರು, ಕುರುಬ ಸಮಾಜದ ಹಿರಿಯ ಚೇತನ, ಶ್ರೀ ಬೀರೇಶ್ವರ ವಿದ್ಯಾವರ್ಧಕ ಸಂಘ, ಶ್ರೀ ಬೀರೇಶ್ವರ ಜಾಗದ ಅಭಿವೃದ್ಧಿ ಟ್ರಸ್ಟ್ ಖಜಾಂಚಿಗಳು, ಎಪಿಎಂಸಿ ಮಾಜಿ ನಿರ್ದೇಶಕರು, ದಾವಣಗೆರೆ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಮಾಜಿ ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್ ಮುಖಂಡರು, ಹಿರಿಯ ಮುತ್ಸದ್ದಿ, ಸರಳ ಸಜ್ಜನಿಕೆಯ, ನೇರ ನಿಷ್ಠೂರ, ಕುರುಬ ಸಮಾಜದ ಅನೇಕ ಸಂಘ -ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಸಂಘಟನಾ ಚತುರರೂ ಆಗಿದ್ದ

## ಶ್ರೀಯುತ ಕೆಂಗೋ ಹನುಮಂತಪ್ಪ

ಅವರ ನಿಧನವು ಸಮಾಜಕ್ಕೆ ತುಂಬಲಾರದ ನಷ್ಟವಾಗಿದ್ದು, ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ.
ಅವರ ಕುಟುಂಬಕ್ಕೆ ದುಃಖವನ್ನು ಸಹಿಸಿಕೊಳ್ಳುವ ಶಕ್ತಿಯನ್ನು ಭಗವಂತನು ನೀಡಲಿ ಎಂದು ಪ್ರಾರ್ಥಿಸುತ್ತೇವೆ.

### ದುಃಖ ತಪ್ತರು:

**♦ ಬಳ್ಳಾರಿ ಷಣ್ಮುಖಪ್ಪ ♦ ಬಿ.ಹೆಚ್. ಪರಶುರಾಮಪ್ಪ ♦ ಜೆ.ಕೆ.ಕೊಟ್ರಬಸಪ್ಪ ♦ ಹೆಚ್.ಬಿ. ಗೋಣೆಪ್ಪ ♦ ಪಿ.ರಾಜ್‌ಕುಮಾರ್ ♦ ಎಸ್.ಎಲ್. ಆನಂದಪ್ಪ**

♦ ಜಿಲ್ಲಾ ಕುರುಬರ ಸಂಘ ದಾವಣಗೆರೆ ♦ ಶ್ರೀ ಬೀರೇಶ್ವರ ವಿದ್ಯಾವರ್ಧಕ ಸಂಘ (ರಿ) ♦ ಶ್ರೀ ಬೀರೇಶ್ವರ ಜಾಗದ ಅಭಿವೃದ್ಧಿ ಟ್ರಸ್ಟ್

♦ ನಗರ ಕುರುಬರ ಸಂಘ ♦ ♦ ಸಿ.ಬಿ.ಎಸ್.ಸಿ. ವಸತಿಯುತ ಶಾಲೆ ಜೆ.ಹೆಚ್. ಪಟೇಲ್ ಬಡಾವಣೆ, ಶಾಮನೂರು

♦ ಶ್ರೀಮತಿ ಹನುಮಮ್ಮ ಲಾಳಿ ಹನುಮಂತಪ್ಪ ಕಿರಿಯ ಪ್ರಾಥಮಿಕ ಶಾಲೆ, ಬಾಲಾಜಿ ನಗರ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಸರ್ವ ಪದಾಧಿಕಾರಿಗಳು.

♦ ಶ್ರೀ ಬೀರೇಶ್ವರ ಭವನ (ಶ್ರೀಮತಿ ಈರಮ್ಮ ಹಾಲಮ್ಮ ಮಾಗೋಡು ಹನುಮಂತಪ್ಪ ಕಲ್ಯಾಣ ಮಂಟಪ) ದೇವರಾಜ್ ಅರಸ್ ಬಡಾವಣೆ, ದಾವಣಗೆರೆ.

♦ ದಾವಣಗೆರೆ ಜಿಲ್ಲಾ ಕುರುಬ ಸಮಾಜ ಹಾಗೂ ತಾಲ್ಲೂಕು ಕುರುಬ ಸಮಾಜದ ಅಧ್ಯಕ್ಷರು ಹಾಗೂ ಪದಾಧಿಕಾರಿಗಳು

♦ ದಾವಣಗೆರೆ ಜಿಲ್ಲಾ ಕುರುಬರ ವಿದ್ಯಾವರ್ಧಕ ಸಂಘ (ರಿ) ♦ ಶ್ರೀ ಬೀರಲಿಂಗೇಶ್ವರ ಪದವಿ ಪೂರ್ವ ಕಾಲೇಜು, ಹದಡಿ ರಸ್ತೆ, ದಾವಣಗೆರೆ.

♦ ಕರ್ನಾಟಕ ಪ್ರದೇಶ ಕುರುಬರ ಸಂಘ ♦ ಜಿಲ್ಲಾ ಕುರುಬರ ಯುವ ಘಟಕ ♦ ಕನಕ ಪಟ್ಟಣ ಸಹಕಾರ ಬ್ಯಾಂಕ್ ನಿಯಮಿತ

♦ ಬೀರೇಶ್ವರ ವ್ಯಾಯಾಮ ಶಾಲೆ ♦ ಬೀರೇಶ್ವರ ವ್ಯಾಯಾಮ ಶಾಲೆ ದೇವರಾಜ್ ಅರಸ್ ಬಡಾವಣೆ

♦ ಜಿಲ್ಲಾ ಕನಕ ನೌಕರರ ಬಳಗ ♦ ಕನಕ ಯುವಸೇನೆ, ಕನಕ ಯುವ ಘರ್ಜನೆ ♦ ಅಹಲ್ಯಾ ಮಹಿಳಾ ಸಂಘ

♦ ಶ್ರೀ ಬೀರಲಿಂಗೇಶ್ವರ ದೇವಸ್ಥಾನ ಯುವಕರ ಸಂಘ ಶಿವಾಜಿ ನಗರ ದಾವಣಗೆರೆ ♦ ಜಿಲ್ಲಾ ಕನಕ ಯುವಕರ ಬಳಗ, ಕಾಳಿದಾಸ ನಗರ , ನಿಟುವಳ್ಳಿ ದಾವಣಗೆರೆ


♦ ಜಿಲ್ಲಾ ಹಾಲುಮತ ಮಹಾಸಭಾ ♦ ಹಾಲುಮತ ಸೌಹಾರ್ದ ಸಹಕಾರ ನಿಯಮಿತ ♦ ಸಂಗೊಳ್ಳಿ ರಾಯಣ್ಣ ಯುವಕರ ಸಂಘ

♦ ವಿಜಯನಗರ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ♦ ಶ್ರೀ ಕವಿರತ್ನ ಕಾಳಿದಾಸ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ

♦ ಯಶಸ್ವಿನಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ♦ ಶ್ರೀ ಕಾಗಿನೆಲೆ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ♦ ಶ್ರೀ ಸಾಯಿ ಎಂಟರ್ ಪ್ರೈಸಸ್

**ಜಿಲ್ಲೆಯ ಸಮಾಜದ ವಿವಿಧ ಸಂಘಟನೆಗಳ ಸರ್ವ ಪದಾಧಿಕಾರಿಗಳು, ಸಮಸ್ತ ಅಭಿಮಾನಿ ವರ್ಗ ಹಾಗೂ ಸರ್ವ ಸಮಾಜ ಬಾಂಧವರು.**

# ಅಪ್ರತಿಮ ದೇಶ ಭಕ್ತ, ಸ್ವಾತಂತ್ರ್ಯ ವೀರ ಸಾವರ್ಕರ್ ಒಂದು ನೆನಪು



ಹರಿಹರ, ಮೇ 29- ದೇಶದ ಸ್ವಾತಂತ್ರ್ಯಕ್ಕಾಗಿ ಅನೇಕ ವೀರರು ತಮ್ಮ ಪ್ರಾಣ ಕಳೆದುಕೊಂಡಿದ್ದು, ಅವರಲ್ಲಿ ಅಪ್ರತಿಮ ಧೀರ ಸಾವರ್ಕರ್ ಒಬ್ಬರು. ವಿನಾಯಕ ದಾಮೋದರ ಸಾವರ್ಕರ್ ಅವರ ಜನ್ಮದಿನ ನಿಮಿತ್ತ ಈ ಕೊಲ್ಯಾಜ್ ಚಿತ್ರದ ಮೂಲಕ ಇಂದಿನ ಯುವ ತರುಣರಲ್ಲಿ ಸ್ಫೂರ್ತಿ ತುಂಬುವ ನಿಟ್ಟಿನಲ್ಲಿ ದ್ರೋಣಾಚಾರ್ಯ ಸಮ್ಮಾನ್ ಪುರಸ್ಕೃತ, ನಿವೃತ್ತ ಕಲಾ ಶಿಕ್ಷಕ ಡಾ. ಜಿ.ಜೆ. ಮೆಹೆಂದಳೆಯವರು ಚಿತ್ರ ರಚಿಸಿ ತಮ್ಮ ಕಛೇರಿಯಲ್ಲಿ ಬಿಡುಗಡೆ ಮಾಡಿದರು.

ಕೊಲ್ಯಾಜ್‌ನಲ್ಲಿ ಅವರ ಭಾವ ಚಿತ್ರದ ಜೊತೆಗೆ ಅವರನ್ನು ಬ್ರಿಟಿಷರು ಲಂಡನ್ನಿನ ವಿಕ್ಟೋರಿಯಾ ನಿಲ್ದಾಣದಲ್ಲಿ ಸೆರೆ ಹಿಡಿದು ಬಂಧಿಸಿ ಮೋರಿಯಾ ಎಂಬ ಹಡಗಿನಲ್ಲಿ ತರುತ್ತಿರುವಾಗ ದಾರಿ ಮಧ್ಯೆ ಮಾರ್ಷಲ್ ಎಂಬ ಬಂದರು ಕಟ್ಟೆ ಬಳಿ ಶೌಚಾಲಯದ ಕಿಟಕಿ ಮೂಲಕ ಸಮುದ್ರಕ್ಕೆ ಜಿಗಿದು ಈಜಿ ತಪ್ಪಿಸಿಕೊಂಡ ಘಟನೆ, ಅಂಡಮಾನ್ ದ್ವೀಪದ ಸೆಲ್ಯುಲರ್ ಜೈಲಿನಲ್ಲಿ ಹದಿಮೂರು ವರ್ಷಗಳ ಕಾಲ ಕರಿ ನೀರಿನ ಶಿಕ್ಷೆ ಅನುಭವಿಸಿದ ಜೈಲಿನ ಚಿತ್ರದ ಕೊಲ್ಯಾಜ್ ಇದಾಗಿದೆ.

# ಸ್ಯಾನಿಟೈಸರ್ ಸಿಂಪಡಿಸಿದ ಸದಸ್ಯ



ದಾವಣಗೆರೆ, ಮೇ 21- ನಗರದ 31 ನೇ ವಾರ್ಡ್ ನ ಮಹಾನಗರ ಪಾಲಿಕೆ ಸದಸ್ಯ ಕಾಂಗ್ರೆಸ್‌ನ ನಾಗರಾಜ್ ಪಾಮೇನಹಳ್ಳಿ ಕೋವಿಡ್ ಹಿನ್ನೆಲೆಯಲ್ಲಿ ವಾರ್ಡ್‌ಗೆ ಸ್ಯಾನಿಟೈಸರ್ ಸಿಂಪಡಣೆ ಮಾಡಿಸಿದ್ದಾರೆ. ಜನರ ಸುರಕ್ಷತೆ ಹಿನ್ನೆಲೆ ಇಡೀ ವಾರ್ಡ್‌ಗೆ ಸ್ವತಃ ತಾವೇ ಸ್ವಂತ ಹಣದಲ್ಲಿ ಸ್ಯಾನಿಟೈಸರ್ ಮಾಡಿಸಿದ್ದಾರೆ.

5 ಸಾವಿರ ಲೀಟರ್ ಸಾಮರ್ಥ್ಯದ ಟ್ಯಾಂಕರ್ ಮೂಲಕ ಮನೆ ಮನೆಗೂ ಸ್ಯಾನಿಟೈಸರ್ ಸಿಂಪಡಿಸುತ್ತಿದ್ದಾರೆ. ಕೋವಿಡ್ ಹೆಚ್ಚಳವಾದ ಹಿನ್ನೆಲೆಯಲ್ಲಿ ವಾರ್ಡ್ ನ ಜನರು ಭಯಭೀತರಾಗಿದ್ದರು. ಸ್ಥಳೀಯರ ಆರೋಗ್ಯ ದೃಷ್ಟಿಯಿಂದ ಈ ಕಾರ್ಯ ಮಾಡುತ್ತಿದ್ದಾರೆ. ಈ ವಾರ್ಡ್‌ನಲ್ಲಿ ಬಹುತೇಕ ಬಡ ಮಧ್ಯಮ ಹಾಗೂ ದಿನಗೂಲಿ ಜನರೇ ವಾಸ ಮಾಡುತ್ತಿದ್ದು ಅವರ ಆರೋಗ್ಯ ಕಾಪಾಡುವ ದೃಷ್ಟಿಯಿಂದ ಪಾಲಿಕೆ ಸದಸ್ಯ ಕಾಂಗ್ರೆಸ್ ನ ನಾಗರಾಜ್ ಪಾಮೇನಹಳ್ಳಿಯರವರು ಈ ಕಾರ್ಯ ಮಾಡುತ್ತಿದ್ದಾರೆ.

# ಕೋವಿಡ್ : ರಾಣೇಬೆನ್ನೂರಿನಲ್ಲಿ ಗ್ರಾಮ ಪಂಚಾಯ್ತಿ ಮಟ್ಟದಲ್ಲಿ ಕ್ರಮ



ರಾಣೇಬೆನ್ನೂರು, ಮೇ 29- ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಕೋವಿಡ್ ನಿಯಂತ್ರಣಕ್ಕೆ ಕೈಗೊಂಡಿರುವ ಕ್ರಮಗಳು, ಸೋಂಕಿತರ ಜೀವ ರಕ್ಷಣೆಗೆ ಅನುಸರಿಸುವ ಮಾರ್ಗಗಳು, ಅವರಿಗೆ ಅವಶ್ಯ ಔಷಧೋಪಚಾರ ಮುಂತಾದವುಗಳ ಬಗ್ಗೆ ಮಾಹಿತಿ ಪಡೆದ ಶಾಸಕ ಅರುಣಕುಮಾರ ಪೂಜಾರ ಅವರು ಗ್ರಾ.ಪಂ. ಹಾಗೂ ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ದಕ್ಷತೆಯಿಂದ ಕಾರ್ಯನಿರ್ವಹಿಸುವಂತೆ ಸೂಚನೆ ನೀಡಿದರು.

ಚಳಗೇರಿ, ಕರೂರು, ಕೋಡಿಯಾಲ ಹೊಸಪೇಟೆ, ಮಾಕನೂರ, ಕುಪ್ಪೇಲೂರು, ತುಮ್ಮಿನಕಟ್ಟಿ, ಇಟಗಿ, ಮುದೇನೂರು ಮುಂತಾದ ಪಂಚಾಯ್ತಿಗಳಿಗೆ ಶಾಸಕರು ಭೇಟಿ ನೀಡಿದರು. ವಿವಿಧ ಇಲಾಖೆ ಅಧಿಕಾರಿಗಳು ಶಾಸಕರ ಜೊತೆಗಿದ್ದು, ಅವಶ್ಯ ಕ್ರಮಗಳನ್ನು ಜರುಗಿಸಿದರು.

# ಸರತಿ ಸಾಲಿನಲ್ಲಿ ನಿಂತು ಲಸಿಕೆ ಪಡೆದ ಪಾಲಿಕೆ ಸದಸ್ಯ ವೀರೇಶ್



ದಾವಣಗೆರೆ, ಮೇ 29- ಮಹಾನಗರ ಪಾಲಿಕೆಯ 33ನೇ ವಾರ್ಡಿನಲ್ಲಿ ಇಂದು ಏರ್ಪಾಡಾಗಿದ್ದ ಲಸಿಕೆ ನೀಡುವ ಕಾರ್ಯಕ್ರಮದಲ್ಲಿ ಆ ವಾರ್ಡಿನ ಸದಸ್ಯ ಕೆ.ಎಂ.ವೀರೇಶ್ ಅವರೂ ಕೂಡ ಸಾರ್ವಜನಿಕರೊಂದಿಗೆ ಸರತಿ ಸಾಲಿನಲ್ಲಿ ನಿಂತು ಲಸಿಕೆ ಪಡೆದರು.

# ಮಂಗಳಮುಖಿಯರಿಗೆ ದಿನಸಿ ಕಿಟ್ ವಿತರಣೆ



ದಾವಣಗೆರೆ, ಮೇ 29- ಕೊರೊನಾದಿಂದ ಸಂಕಷ್ಟದಲ್ಲಿರುವ ಜಿಲ್ಲೆಯ ಮಂಗಳಮುಖಿಯರಿಗೆ ಜಿಲ್ಲಾಡಳಿತ ದಿನಸಿ ಕಿಟ್‌ಗಳನ್ನು ನೀಡುವ ಮೂಲಕ ನೆರವಿಗೆ ಮುಂದಾಗಿದೆ.

ಜಿಲ್ಲಾಡಳಿತದಿಂದ ನೀಡಲಾಗಿರುವ ಸುಮಾರು 100 ದಿನಸಿ ಕಿಟ್‌ಗಳನ್ನು ನಗರದ ಕೆ. ಆರ್. ಮಾರುಕಟ್ಟೆಯಲ್ಲಿ ತಹಶೀಲ್ದಾರ್ ಬಿ.ಎನ್. ಗಿರೀಶ್ ವಿತರಿಸಿದರು.

ತಾಲ್ಲೂಕಿನಲ್ಲಿರುವ ಮಂಗಳಮುಖಿಯರು ಸಂಕಷ್ಟದಲ್ಲಿದ್ದು, ಬದುಕು ನಡೆಸಲು ಭಿಕ್ಷೆ ಬೇಡುವಂತಹ ಸ್ಥಿತಿ ನಿರ್ಮಾಣ ಆಗಿದೆ ಎಂಬ ವಿಚಾರ ಜಿಲ್ಲಾಡಳಿತ ಗಮನಕ್ಕೆ ಬಂದಿತ್ತು. ಹೀಗಾಗಿ, ಜಿಲ್ಲಾಧಿಕಾರಿಗಳು ಈ ಮಂಗಳಮುಖಿಯರಿಗೆ ಫುಡ್‌ಕಿಟ್ ನೀಡುವಂತೆ ಸೂಚನೆ ನೀಡಿದ್ದರು.

ತಾಲ್ಲೂಕಿನಲ್ಲಿ ಸುಮಾರು 200 ಜನರು ಮಂಗಳಮುಖಿಯರಿದ್ದು, ಅವರು ಬೇರೆ ಬೇರೆ ಕಡೆ ಇದ್ದಾರೆ. ಈಗ ಸದ್ಯಕ್ಕೆ 100 ಮಂದಿ ಮಂಗಳಮುಖಿಯರಿಗೆ ನಗರದ ದೇವರಾಜ ಅರಸು ಬಡಾವಣೆಯಲ್ಲಿರುವ ಲಿಂಗತ್ವ ಅಲ್ಪ ಸಂಖ್ಯಾತರ ಸಂಘದ ಕಚೇರಿ ಮುಖಾಂತರ ಕಿಟ್‌ಗಳನ್ನು ವಿತರಿಸಲಾಗಿದೆ. ಎಲ್ಲರಿಗೂ ಆಹಾರ ಧಾನ್ಯಗಳ ಕಿಟ್‌ಗಳನ್ನು ಶೀಘ್ರವೇ ವಿತರಿಸಲಾಗುವುದು ಎಂದು ತಹಶೀಲ್ದಾರ್ ಗಿರೀಶ್ ತಿಳಿಸಿದರು.

ಲಿಂಗತ್ವ ಅಲ್ಪ ಸಂಖ್ಯಾತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚೈತ್ರಾ, ತಾಲ್ಲೂಕು ದಂಡಾಧಿಕಾರಿ ಗಿರೀಶ್ ಅವರು ಜಿಲ್ಲಾಧಿಕಾರಿಗಳ ಸೂಚನೆಯಂತೆ ಆಹಾರ ಧಾನ್ಯದ ಕಿಟ್‌ಗಳನ್ನು ವಿತರಿಸಿರುವುದು ಕೊರೊನಾದ ಸಂದಿಗ್ಧ ಪರಿಸ್ಥಿತಿಯಲ್ಲಿ ಕಿಟ್ ನೀಡುವ ಮೂಲಕ ಮಂಗಳಮುಖಿಯರಿಗೆ ಸಹಾಯ ಮಾಡಿದ್ದಾರೆ.

ಸಂಸ್ಥೆ ಮೂಲಕ ಜಿಲ್ಲೆಯಲ್ಲಿ ಇರುವ ಮಂಗಳಮುಖಿಯರಿಗೆ ತಲುಪಿಸುತ್ತೇವೆ ಎಂದು ಕೃತಜ್ಞತೆ ಸಲ್ಲಿಸಿದರು.

# ಅನಾಥ ಮಕ್ಕಳಿಗೆ ಹಿರೇಕಲ್ಮಠದಿಂದ ಶಿಕ್ಷಣ



ಹೊನ್ನಾಳಿ, ಮೇ 29- ಕೊರೊನಾದಿಂದ ತಂದೆ, ತಾಯಿಗಳನ್ನು ಕಳೆದುಕೊಂಡಿರುವ ಅನಾಥ ಮಕ್ಕಳನ್ನು ಶ್ರೀಮಠ ಪೋಷಣೆ ಮಾಡಲಿದ್ದು, ಶ್ರೀಮಠವನ್ನು ಸಂಪರ್ಕಿಸುವಂತೆ ಹಿರೇಕಲ್ಮಠದ ಒಡೆಯರ್ ಡಾ. ಚನ್ನಮಲ್ಲಿಕಾರ್ಜುನ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಶ್ರೀಮಠದಲ್ಲಿ ಇಂದು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಶ್ರೀಗಳು, ಕೊರೊನಾ ಸೋಂಕಿನಿಂದ ಸಾವಿರಾರು ಜನ ಪ್ರಾಣ ಕಳೆದುಕೊಂಡಿದ್ದಾರೆ. ಅಲ್ಲದೆ, ಅವರ ಕುಟುಂಬ ಬೀದಿಗೆ ಬಂದಿದೆ. ಇಂಥ ಸಂದರ್ಭದಲ್ಲಿ ಮಠಮಾನ್ಯಗಳು ಅನಾಥರಾದ ಮಕ್ಕಳನ್ನು ಪಡೆದು, ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತಿವೆ. ಕೊರೊನಾ ಸೋಂಕಿನಿಂದ ತಂದೆ-ತಾಯಿ ಮೃತಪಟ್ಟ ಮಕ್ಕಳಿಗೆ ಯಾರೂ ಇಲ್ಲ ಎಂದರೆ ಅಂತಹ ಮಕ್ಕಳಿಗೆ ನಮ್ಮ ಶ್ರೀಮಠದಿಂದಲೂ ಉಚಿತ ಶಿಕ್ಷಣ ನೀಡುವುದಲ್ಲದೆ ಎಲ್ಲಾ ಸೌಲಭ್ಯಗಳನ್ನು ನೀಡಲಿದ್ದೇವೆ ಎಂದರು.

ಎರಡನೇ ಅಲೆಯಲ್ಲಿ ಕೊರೊನಾ ಸೋಂಕು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ಹೊನ್ನಾಳಿ ಹಾಗೂ ನ್ಯಾಮತಿ ತಾಲ್ಲೂಕಿನ ಹಲವು ವಸತಿ ಶಾಲೆ ಹಾಗೂ ವಸತಿ ನಿಲಯಗಳಲ್ಲಿ ಕೋವಿಡ್ ಕೇರ್ ಸೆಂಟರ್‌ಗಳನ್ನು ಪ್ರಾರಂಭಿಸಿದ್ದು, ಅವಶ್ಯವಿದ್ದರೆ ಶ್ರೀಮಠದಿಂದ ಕೋವಿಡ್ ಸೆಂಟರ್ ತೆರೆದು ಸೌಲಭ್ಯ ಕಲ್ಪಿಸುವುದಕ್ಕೆ ಮಠದ ಕಟ್ಟಡಗಳನ್ನು ಬಳಸಿಕೊಳ್ಳಲು ಅವಕಾಶ ಮಾಡಿಕೊಡುವುದಾಗಿ ಹೇಳಿದರು.

ಮಠದ ಶಾಲೆಗಳ ಬಸ್‌ಗಳನ್ನು ಕೂಡ ಬಳಸಿಕೊಳ್ಳಿ ಎಂದು ಈಗಾಗಲೇ ಜಿಲ್ಲಾಧಿಕಾರಿಗಳಿಗೆ ತಿಳಿಸಿದ್ದೇವೆ. ಅನಾಥ ಮಕ್ಕಳ ಸೌಲಭ್ಯಕ್ಕಾಗಿ ಮೊಬೈಲ್ ಸಂಖ್ಯೆ 991632224., 9448154536 ಗೆ ಸಂಪರ್ಕಿಸುವಂತೆ ತಿಳಿಸಿದರು. ಶ್ರೀಮಠದ ವ್ಯವಸ್ಥಾಪಕ ಚನ್ನಬಸವಯ್ಯ ಉಪಸ್ಥಿತರಿದ್ದರು.

# ಜಿಲ್ಲಾ ಉಸ್ತುವಾರಿ ಸಚಿವರ ಜಿಲ್ಲಾ ಪ್ರವಾಸ ನಾಳೆ

ದಾವಣಗೆರೆ, ಮೇ 29- ನಗರಾಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ.ಬಸವರಾಜ್ ಅವರು ಮೇ 31 ಮತ್ತು ಜೂನ್ 01 ರಂದು ಜಿಲ್ಲಾ ಪ್ರವಾಸ ಕೈಗೊಳ್ಳಲಿದ್ದಾರೆ.

ಸಚಿವರು ಮೇ 31 ರ ಸೋಮವಾರ ಮಧ್ಯಾಹ್ನ 3 ರಿಂದ ಸಂಜೆ 4ರ ವರೆಗೆ ಹೊನ್ನಾಳಿ ತಾ. ಪಂ. ಸಭಾಂಗಣದಲ್ಲಿ ಹೊನ್ನಾಳಿ ತಾಲ್ಲೂಕಿನ ಕೋವಿಡ್-19 ಸೋಂಕಿತರ ಚಿಕಿತ್ಸೆಗಾಗಿ ನಿರ್ಮಿಸಿರುವ 50 ಹಾಸಿಗೆಗಳ ಕೋವಿಡ್ ಆರೈಕೆ ಕೇಂದ್ರದ ಉದ್ಘಾಟನೆಯಲ್ಲಿ ಪಾಲ್ಗೊಳ್ಳುವರು.

# ಸನಾತನ ಹಿಂದೂ ಧರ್ಮದ ಪದ್ಧತಿ ಸಮಸ್ಯೆಗೆ ಪರಿಹಾರ



ಡಾ . ವಿಜಯಲಕ್ಷ್ಮಿ ಬಾಳಕುಂದ್ರಿ

ದಾವಣಗೆರೆ, ಮೇ 29- ಸನಾತನ ಹಿಂದೂ ಧರ್ಮದ ಪದ್ಧತಿಗಳು, ಆಚಾರ - ವಿಚಾರಗಳಲ್ಲಿ ಇಂದಿನ ಸಮಸ್ಯೆಗಳಿಗೆ ಪರಿಹಾರವಿದೆ ಎಂದು ಹೃದಯ ತಜ್ಞರಾದ ಡಾ . ವಿಜಯಲಕ್ಷ್ಮಿ ಬಾಳಕುಂದ್ರಿ ತಿಳಿಸಿದರು.

ಕರ್ನಾಟಕ ರಾಜ್ಯ ಮಾರಾಟ ಮಹಾಮಂಡಳ, ಜಿಲ್ಲಾ ಸಹಕಾರ ಯೂನಿಯನ್ ಮತ್ತು ಸಹಕಾರ ಇಲಾಖೆ ಆಶ್ರಯದಲ್ಲಿ ಸಹಕಾರ ಸಂಘಗಳ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗದವರಿಗೆ ಆನ್‌ಲೈನ್‌ನಲ್ಲಿ 'ಸಹಕಾರಿಗಳಿಗೆ ಕೊರೊನಾ ಬಗ್ಗೆ ಮುಂಜಾಗ್ರತಾ ಕ್ರಮಗಳು' ಕುರಿತು ಏರ್ಪಡಿಸಿದ್ದ ತರಬೇತಿ ಶಿಬಿರದಲ್ಲಿ ಅವರು ಉಪನ್ಯಾಸ ನೀಡುತ್ತಿದ್ದರು.

ಶುಚಿತ್ವವು ದೈವತ್ವದ ಪ್ರತೀಕವಾಗಿದೆ. ಶುಚಿತ್ವವನ್ನು ಕಾಪಾಡಿಕೊಳ್ಳಬೇಕು. ಸರ್ಕಾರ ಮತ್ತು ಸ್ಥಳೀಯ ಸಂಸ್ಥೆಗಳು ವಿಧಿಸುವ ಕಟ್ಟುಪಾಡುಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಆಶಿಸಿದರು.

ರೋಗ ಬಂದಾಗ ಕ್ರಮಗಳನ್ನು ಕೈಗೊಳ್ಳುವ ಮೊದಲು ರೋಗ ಬರದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ವೈದ್ಯರು ಸೂಚಿಸುವ ಚಿಕಿತ್ಸೆ ಪಡೆಯಬೇಕು. ಮಾಸ್ಕ್ ಕಡ್ಡಾಯವಾಗಿ ಹಾಕಬೇಕು. ಸಾಮಾಜಿಕ ಅಂತರ ಕಾಯ್ದುಕೊಳ್ಳುವುದು ಅಗತ್ಯ ಎಂದು ಹೇಳಿದರು.

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಸಹಕಾರ ಯೂನಿಯನ್ ಅಧ್ಯಕ್ಷ ಎನ್.ಎ.ಮುರುಗೇಶ್ ಅವರು, ಕೊರೊನಾ ನಿಯಂತ್ರಣಕ್ಕೆ ಸರ್ಕಾರದ ಜೊತೆಗೆ ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು.

ಈ ತರಬೇತಿ ಶಿಬಿರದಲ್ಲಿ ಜಿಲ್ಲಾ ಸಹಕಾರ ಯೂನಿಯನ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಹೆಚ್.ಸಂತೋಷಕುಮಾರ್, ಜಿಲ್ಲೆಯ ಸಹಕಾರ ಸಂಘಗಳ ಅನೇಕ ಆಡಳಿತ ಮಂಡಳಿಗಳವರು, ಸಿಬ್ಬಂದಿಗಳು ಭಾಗವಹಿಸಿದ್ದರು.

# ಹಿರಿಯ ಮುಖಂಡ ಕೆಂಗೋ ಹನುಮಂತಪ್ಪ ಇನ್ನಿಲ್ಲ

(8ನೇ ಪುಟದಿಂದ) ಸರ್ಕಾರಿ ಕೆಲಸಕ್ಕೆ ರಾಜೀನಾಮೆ ನೀಡಿ, ಜನ ಸಂಘ ಪರಿವಾರದಲ್ಲಿ ಕಾರ್ಯ ನಿರ್ವಹಿಸಿದರು.

ರಾಜಕೀಯ ಹಿರಿಯ ಮುಖಂಡರುಗಳಾಗಿದ್ದ ಬಿ.ಬಿ. ಶಿವಪ್ಪ, ಎ.ಕೆ. ಸುಬ್ಬಯ್ಯ, ಎಸ್. ಮಲ್ಲಿಕಾರ್ಜುನಯ್ಯ, ಕರಂಬಳ್ಳಿ ಸಂಜೀವಶೆಟ್ರು, ಚನ್ನಯ್ಯ ಒಡೆಯರ್, ಕೆ. ಮಲ್ಲಪ್ಪ, ಡಾ. ವೈ. ನಾಗಪ್ಪ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಹೆಚ್. ವಿಶ್ವನಾಥ್, ಹೆಚ್.ಎಂ.ರೇವಣ್ಣ ಅವರುಗಳ ಆಪ್ತ ಒಡನಾಡಿಗಳಾಗಿ ಗುರುತಿಸಿಕೊಂಡಿದ್ದರು.

ಕಿಸಾನ್ ಮಜ್ದೂರ್ ಕಾಂಗ್ರೆಸ್, ಕುರುಬ ಸಮಾಜ ಸಂಘಟನೆಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದ ಅವರು, ಜನಸಂಘದಿಂದ ಶಾಸಕ ಸ್ಥಾನಕ್ಕೆ ಚುನಾವಣೆಗೂ ಸ್ಪರ್ಧಿಸಿದ್ದರು. ನಂತರದ ದಿನಗಳಲ್ಲಿ ಜನತಾ ಪರಿವಾರದಿಂದ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗಿದ್ದರು. ದಾವಣಗೆರೆ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷರಾಗಿ, ಎಪಿಎಂಸಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದ ಅವರು, ಸರಳ - ಸಜ್ಜನಿಕೆಗೆ, ನೇರ-ನಿಷ್ಠೂರತೆಗೆ ಹೆಸರಾಗಿದ್ದರು.

ಸಮಾಜದ ಹಿರಿಯ ಮುಖಂಡರುಗಳ ಸಹಕಾರದೊಂದಿಗೆ ಕೆಂಗೋ ಹನುಮಂತಪ್ಪ ಅವರು 2013ರಲ್ಲಿ ನಡೆಸಿದ ರಾಜ್ಯ ಮಟ್ಟದ ಕುರುಬರ ಜಾಗೃತಿ ಸಮಾವೇಶವು ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಗಾದಿಗೇರಲು ಅಡಿಪಾಯವಾದಂತಾಗಿತ್ತು. ಮಾಜಿ ಶಾಸಕ ಕೆ. ಮಲ್ಲಪ್ಪ ಮತ್ತು ಕೆಂಗೋ ಹನುಮಂತಪ್ಪ ಅವರುಗಳು ದಾವಣಗೆರೆ ಜಿಲ್ಲೆಯ ಕುರುಬ ಸಮಾಜದ ಸಂಘಟನೆಯ ಜೋಡೆತ್ತುಗಳಂತಿದ್ದರು. ಕಳೆದ 7-8 ತಿಂಗಳ ಹಿಂದೆ ಕೆ. ಮಲ್ಲಪ್ಪ ಅವರು ಇನ್ನಿಲ್ಲವಾದ ನಂತರದ ದಿನಗಳಲ್ಲಿ ಕುರುಬ ಸಮಾಜದಲ್ಲಿ ಕೆಂಗೋ ಹನುಮಂತಪ್ಪ ಯಜಮಾನನಂತಿದ್ದರು.

ಸಿದ್ದರಾಮಯ್ಯ ಅವರೊಂದಿಗೆ ಒಪ್ಪ ಒಡನಾಟದಿಂದಾಗಿ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಬಯಲು ಸೀಮೆ ಅಭಿವೃದ್ಧಿ ನಿಗಮದ ಅಧ್ಯಕ್ಷರಾಗಿದ್ದರು. ವಿಶ್ವಭಾರತಿ ವಿದ್ಯಾಸಂಸ್ಥೆಯ ಕಾರ್ಯದರ್ಶಿಯಾಗಿ, ಜಿಲ್ಲಾ ಕುರುಬರ ಸಂಘದ ಅಧ್ಯಕ್ಷರಾಗಿ, ಕರ್ನಾಟಕ ಪ್ರದೇಶ ಕುರುಬರ ಸಂಘದ ನಿರ್ದೇಶಕರಲ್ಲದೇ, ಶ್ರೀ ಬೀರೇಶ್ವರ ವಿದ್ಯಾವರ್ಧಕ ಸಂಘ, ಶ್ರೀ ಬೀರೇಶ್ವರ ಜಾಗದ ಅಭಿವೃದ್ಧಿ ಟ್ರಸ್ಟ್ ಸೇರಿದಂತೆ, ಹಲವಾರು ಸಂಘಟನೆಗಳಲ್ಲಿ ಸಕ್ರಿಯ ಪದಾಧಿಕಾರಿಗಳಾಗಿ ಕಾರ್ಯ ನಿರ್ವಹಿಸುತ್ತಿದ್ದರು.

# ವಕೀಲರಿಗೆ ನ್ಯಾಯಾಲಯದ ಆವರಣದಲ್ಲಿ ಲಸಿಕೆ ನೀಡಲು ಒತ್ತಾಯ

ದಾವಣಗೆರೆ, ಮೇ 29- ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರ ನೇತೃತ್ವದಲ್ಲಿ ರಾಜ್ಯದಲ್ಲಿ 18 ರಿಂದ 44 ವರ್ಷದೊಳಗಿನವರಿಗೆ ಕೋವಿಡ್ -19 ರ ಲಸಿಕೆಯನ್ನು ಆದ್ಯತೆಯ ಮೇರೆಗೆ ಹಾಕಲು ಪ್ರಾರಂಭಿಸಿದ್ದು, ರಾಜ್ಯ ಸರ್ಕಾರ ವಕೀಲರನ್ನು ಮತ್ತು ನ್ಯಾಯಾಂಗ ಸಿಬ್ಬಂದಿಗಳನ್ನು ಆದ್ಯತೆಯ ಪಟ್ಟಿಯಲ್ಲಿ ಸೇರಿಸಿದೆ. ಆ ಪ್ರಕಾರ ಅದನ್ನು ಪರಿಗಣಿಸಿ, ಜಿಲ್ಲೆಯ ಎಲ್ಲಾ ವಕೀಲರಿಗೆ ಅವರವರ ಸಂಘದಲ್ಲಿ ಇಲ್ಲವೇ ನ್ಯಾಯಾಲಯದ ಆವರಣದಲ್ಲಿ ಲಸಿಕೆಯನ್ನು ನೀಡಬೇಕೆಂದು ಒತ್ತಾಯಿಸಲಾಗಿದೆ.

ಇದಲ್ಲದೇ ಸುಮಾರು ವಕೀಲರು ಈಗಾಗಲೇ ಕೋವ್ಯಾಕ್ಸಿನ್ ಲಸಿ ಕೆಯ ಮೊದಲನೇ ಡೋಸ್ ತೆಗೆದುಕೊಂಡಿದ್ದು, ಇವರುಗಳು ಈಗಾಗಲೇ ಎರಡನೇ ಡೋಸ್ ಲಸಿಕೆ ಹಾಕಿಸಿಕೊಳ್ಳಲು ಅರ್ಹರಿದ್ದು, ಇನ್ನೂ ಕೆಲವರು ಕಾಲಾವಧಿ ಮೀರುತ್ತಾ ಬಂದಿರುತ್ತಾರೆ. ಆದ್ದರಿಂದ ಈ ಕೂಡಲೇ ಅಂತಹ ವಕೀಲರಿಗೂ ಸಹ ನ್ಯಾಯಾಲಯದ ಆವರಣದಲ್ಲಿ ಅಥವಾ ವಕೀಲರ ಸಂಘದಲ್ಲಿ ನಿಗದಿತ ಸಮಯದೊಳಗೆ ಅರ್ಹತೆ ದಿನಾಂಕದೊಳಗೆ, ಅವಧಿ ಮೀರುವ ಮುಂಚಿತವಾಗಿಯೇ ಕೋವ್ಯಾಕ್ಸಿನ್ ಲಸಿಕೆಯನ್ನು ನೀಡುವ ಮೂಲಕ ವಕೀಲರುಗಳಲ್ಲಿ ಇರುವ ಆತಂಕವನ್ನು ದೂರ ಮಾಡಬೇಕೆಂದು ವಕೀಲರ ಸಂಘದ ನಿಕಟಪೂರ್ವ ಉಪಾಧ್ಯಕ್ಷ ಹಾಗೂ ಜಿಲ್ಲಾ ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕ ಹೆಚ್.ದಿವಾಕರ್, ರಾಜ್ಯ ಸಮಿತಿ ಸದಸ್ಯ ಎ.ಸಿ.ರಾಘವೇಂದ್ರ, ಸಹ ಸಂಚಾಲಕ ಕೆ.ಹೆಚ್.ಧನಂಜಯ್, ಎ.ಎಸ್.ಮಂಜುನಾಥ್, ತಿರುಮಲ್ಲೇಶ್, ಶಿವಶಂಕರಪ್ಪ ವಿನಂತಿಸಿದ್ದಾರೆ.

# ಪ್ರತಿಯೊಬ್ಬರೂ ಲಸಿಕೆ ಪಡೆಯಲು ಕರೆ



ದಾವಣಗೆರೆ, ಮೇ 29- ಕೋವಿಡ್ 2ನೇ ಅಲೆ ಹಿನ್ನೆಲೆಯಲ್ಲಿ ದೇಶದಾದ್ಯಂತ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸಾವು-ನೋವನ್ನು ಅನುಭವಿಸುತ್ತಿದ್ದಾರೆ. ಈ ಕೊರೊನಾ ತಡೆಗಟ್ಟುವ ಶಕ್ತಿ ಅವರವರಲ್ಲಿಯೇ ಇದೆ. ಈ ಹಿನ್ನೆಲೆ ಸರ್ಕಾರ ಅತಿ ಹೆಚ್ಚಿನ ಕ್ರಮ ಕೈಗೊಳ್ಳುತ್ತಿದೆ. ಸರ್ಕಾರದೊಂದಿಗೆ ನಾವೂ ಸಹ ಕೈಜೋಡಿಸಿದರೆ ಕೊರೊನಾವನ್ನು ಹೊಡೆದೋಡಿಸಲು ಸಾಧ್ಯ. ಕೇಂದ್ರ ಸರ್ಕಾರ ಪ್ರತಿಯೊಬ್ಬರಿಗೂ ಲಸಿಕೆ ಕೊಡಿಸಬೇಕು ಎಂದು 6 ತಿಂಗಳ ಹಿಂದೆಯೇ ವ್ಯಾಕ್ಸಿನೇಷನ್ ನೀಡಿದರು. ಅದೇ ರೀತಿ ರಾಜ್ಯ ಸರ್ಕಾರ ಕೂಡ ಉತ್ತಮ ಕೆಲಸ ಮಾಡುತ್ತಿದೆ ಎಂದು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಶ್ರೀನಿವಾಸ್ ದಾಸಕರಿಯಪ್ಪ ತಿಳಿಸಿದ್ದಾರೆ.

ಪ್ರತಿಯೊಬ್ಬರೂ ಮೊದಲು ಲಸಿಕೆ ಪಡೆಯಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಸೋಂಕು ಹೆಚ್ಚಾಗುತ್ತಿದೆ.

ಸಂಸದ ಜಿ.ಎಂ.ಸಿದ್ದೇಶ್ವರ ತಮ್ಮ ಕುಟುಂಬದ ಫೌಂಡೇಷನ್‌ನಿಂದ 3 ಮೆಡಿಕಲ್ ಆಕ್ಸಿಜನ್ ಪ್ಲಾಂಟ್‌ಗಳನ್ನು ನೀಡಿದ್ದಾರೆ.

ಹಾಗೆಯೇ ಜಿಲ್ಲೆಯ ಎಲ್ಲಾ ಶಾಸಕರು ತಮ್ಮ ತಾಲ್ಲೂಕು ವ್ಯಾಪ್ತಿಯಲ್ಲಿ ಕೋವಿಡ್ ಸೇವೆಯಲ್ಲಿ ತೊಡಗಿದ್ದಾರೆ. ಪ್ರತಿಯೊಬ್ಬರೂ ಸರ್ಕಾರದ ಮಾರ್ಗಸೂಚಿಗಳನ್ನು ಪಾಲಿಸಿ, ಸರ್ಕಾರ, ಜಿಲ್ಲಾಡಳಿತದೊಂದಿಗೆ ಕೈ ಜೋಡಿಸೋಣ ಎಂದು ಸಾರ್ವಜನಿಕರಿಗೆ ಮನವಿ ಮಾಡಿದ್ದಾರೆ.

# ಲಾಕ್‌ಡೌನ್ : ಅನ್ನ ದಾಸೋಹದವರಿಗೆ ನೀರಿನ ಬಾಟಲಿ ಕೊಡುಗೆ



ದಾವಣಗೆರೆ, ಮೇ 29- ನಗರದ ಕೆ.ಬಿ.ಬಡಾವಣೆಯ ರಾಘವೇಂದ್ರ ಮಠದಲ್ಲಿ ಗುರುರಾಯರ ಸೇವಾ ಸಂಘದವರು ಕೊರೊನಾ ರೋಗಿಗಳಿಗೆ ಅನ್ನ ದಾಸೋಹ ಮಾಡುತ್ತಿರುವ ಕಾರ್ಯಕ್ಕೆ ಉದ್ಯಮಿ ಜೆ. ಎನ್.ಕರಿಬಸಪ್ಪ ಅವರು ನೀರಿನ ಬಾಟಲಿಗಳನ್ನು ಕೊಡುಗೆಯಾಗಿ ನೀಡಿದರು. ಈ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಬಕ್ಕೇಶ್ ನಾಗನೂರು, ಸೇವಾಕರ್ತರಾದ ಚಂದ್ರಶೇಖರ್, ದರ್ಶನ್ ಮತ್ತಿತರರು ಉಪಸ್ಥಿತರಿದ್ದರು.

ಇದೇ ರೀತಿ ಅನ್ನದಾಸೋಹ ಮಾಡುತ್ತಿರುವ ತರಳಬಾಳು ಸೇವಾ ಸಮಿತಿ ಹಾಗೂ ಶಿವಸೈನ್ಯ ಯುವಕ ಸಂಘದವರಿಗೂ ಜೆ.ಎನ್.ಕರಿಬಸಪ್ಪ ಅವರು ನೀರಿನ ಬಾಟಲ್ ಗಳನ್ನು ಕೊಡುಗೆಯಾಗಿ ನೀಡಿದರು.

# ಕೆಂಗೋ ಹನುಮಂತಪ್ಪ ನಿಧನಕ್ಕೆ ಎಸ್ಸೆಸ್-ಎಸ್ಸೆಸ್ಸೆಂ ಸಂತಾಪ

ದಾವಣಗೆರೆ,ಮೇ 29- ಜಿಲ್ಲಾ ಕುರುಬರ ಸಮಾಜದ ಅಧ್ಯಕ್ಷರೂ, ಹಿರಿಯ ಮುತ್ಸದ್ಧಿಗಳೂ, ಕಾಂಗ್ರೆಸ್ ಮುಖಂಡರೂ ಆದ ಕೆಂಗೋ ಹನುಮಂತಪ್ಪ ಅವರ ನಿಧನಕ್ಕೆ ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರುಗಳು ತೀವ್ರ ಶೋಕ ವ್ಯಕ್ತಪಡಿಸಿದ್ದಾರೆ.

ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರಾಗಿದ್ದ ಹನುಮಂತಪ್ಪ ಅವರ ವ್ಯಕ್ತಿತ್ವ ಮತ್ತು ಸಮಾಜದ ವಿವಿಧ ಸಂಘಟನೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ನಿರ್ವಹಿಸಿದ ಸೇವೆಯನ್ನು ಎಸ್ಸೆಸ್ ಮತ್ತು ಎಸ್ಸೆಸ್ಸೆಂ ಮುಕ್ತ ಕಂಠದಿಂದ ಪ್ರಶಂಸಿಸಿದ್ದಾರೆ.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ, ಪ್ರಧಾನ ಕಾರ್ಯದರ್ಶಿ ದಿನೇಶ್ ಕೆ.ಶೆಟ್ಟಿ, ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಡಾ. ವೈ.ರಾಮಪ್ಪ ಅವರುಗಳು ಹನುಮಂತಪ್ಪ ಅವರ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದ್ದಾರೆ.

# ಬಡವರಿಗೆ ಕೊರೊನಾ ಭಯಕ್ಕಿಂತ ಬದುಕಿನ ಭಯವೇ ಹೆಚ್ಚಾಯಿತು

ಓದುಗರ ಪತ್ರ

ಮಾನ್ಯರೇ,

ಉಳ್ಳವರು, ಸರ್ಕಾರಿ ನೌಕರರು ತಮ್ಮ ಆರೋಗ್ಯದ ದೃಷ್ಟಿಯಿಂದ ಮುಖಕ್ಕೆ ಮಾಸ್ಕ್, ಜೇಬಲ್ಲಿ ಸ್ಯಾನಿಟೈಸರ್ ಇಟ್ಟುಕೊಂಡು ಸಾಮಾಜಿಕ ಅಂತರ ಕಾಪಾಡಿಕೊಳ್ಳುತ್ತಾ ಇದ್ದರೆ, ಬಡವರು ತುತ್ತು ಅನ್ನಕ್ಕಾಗಿ ಒದ್ದಾಡುತ್ತಿದ್ದಾರೆ.

ಶ್ರೀಮಂತರು ಜೀವ ಉಳಿಸಿಕೊಳ್ಳುವ ನಿಟ್ಟಿನಲ್ಲಿ ಮನೆಯ ಗೇಟಿಗೆ ಬೀಗ ಹಾಕಿ, ಸ್ಯಾನಿಟೈಸರ್‌ನ ದೊಡ್ಡ ಬಾಟಲನ್ನು ಹಿಡಿದು, ಎಲ್ಲದಕ್ಕೂ ಸ್ಪ್ರೇ ಮಾಡುತ್ತಾ, ಲಾಕ್‌ಡೌನ್ ಮೊದಲೇ ಆಗಬೇಕಿತ್ತು. ಸರ್ಕಾರ ಏನು ಮಾಡುತ್ತಿದೆ. ಜೀವಕ್ಕಿಂತ ದೊಡ್ಡದು ಯಾವುದೂ ಇಲ್ಲಾ ಎಂದು ಮನೆಯಲ್ಲಿ ಟಿವಿ ನೋಡುತ್ತಾ, ಬಗೆ ಬಗೆಯ ಖಾದ್ಯ ಚಪ್ಪರಿಸುತ್ತಾ ಹೇಳುವುದು ಒಂದೆಡೆಯಾಗಿದೆ.

ಅದೇ ಬಡವರು ತುತ್ತು ಅನ್ನಕ್ಕಾಗಿ ದುಡಿಯಲು ಬೀದಿಗೆ ಬಂದು ಪೊಲೀಸರಿಂದ ಸೊಂಟ ಮುರಿಯುವ ಹಾಗೆ ಹೊಡೆತ ತಿನ್ನುತ್ತಾ ಹೆಂಡತಿ ಮಕ್ಕಳ ಹಸಿವನ್ನು ನೀಗಿಸಲು ಹರಸಾಹಸ ಪಡುತ್ತಿದ್ದಾರೆ. ಪರಿಚಯಸ್ಥರಿಂದಲೋ, ಮಾಲೀಕರಿಂದಲೋ ಸಾಲ ಪಡೆದು ಜೀವನ ನಡೆಸುತ್ತಿದ್ದಾರೆ. ಇನ್ನು ಮಧ್ಯಮ ವರ್ಗದರು, ಬಡವರು ಸ್ವಾಭಿಮಾನ, ಆತ್ಮಗೌರವ, ಮುಜುಗರ ಇವನ್ನೆಲ್ಲಾ ತುಂಬಿಕೊಂಡು, ಇತ್ತ ಬಿಪಿಎಲ್ ಕಾರ್ಡುದಾರರು ಅಲ್ಲದೆ, ಅತ್ತ ದುಡಿಮೆಯೂ ಇಲ್ಲದೆ, ತಮ್ಮ ನೋವನ್ನು ತಾವೇ ನುಂಗಿಕೊಳ್ಳುತ್ತಾ ಲಾಕ್‌ಡೌನ್ ಎಂದು ಮುಗಿದೀತೋ, ನಾನೆಂದು ಕೆಲಸಕ್ಕೆ ಹೋಗುವೆನೋ ಎಂಬ ಚಿಂತನೆಯಲ್ಲಿ ಸರ್ಕಾರಕ್ಕೆ, ಕೊರೊನಾಗೆ ಹಿಡಿಶಾಪ ಹಾಕುತ್ತಾ ಉಪವಾಸ, ವನವಾಸದ ಜೀವನ ಸಾಗುತ್ತಿದ್ದಾರೆ.

ಹೀಗೆ ಕೊರೊನಾ ಸಾಂಕ್ರಾಮಿಕ ರೋಗ ಬಹಳಷ್ಟು ಜನರ ಜೀವನದಲ್ಲಿ ಒಂದೊಂದು ರೀತಿಯ ಆಟ ಆಡುತ್ತಿದೆ. ಇದು ಶೀಘ್ರವೇ ಅಂತ್ಯವಾಗಲಿ. ಮೊದಲಿನ ಹಾಗೆ ಜನಜೀವನ ಸಾಮಾನ್ಯವಾಗಲಿ ಅನ್ನುವುದೇ ಎಲ್ಲಾ ಶ್ರಮಿಕರ ಆಶಯವಾಗಿದೆ.

**- ಹೆಲ್ಪ್‌ಲೈನ್ ಸುಭಾನ್**, ದಾವಣಗೆರೆ.

# ಲಸಿಕೆ ಜೀವ ರಕ್ಷಕ, ಪಡೆಯಲು ಹಿಂಜರಿಯಬೇಡಿ

## 18 ವರ್ಷದ ಮೇಲ್ಪಟ್ಟ ಎಲ್ಲಾ ವಿಕಲಚೇತನರಿಗೆ ಕೋವಿಡ್ ಲಸಿಕೆ ಕಡ್ಡಾಯ



ದಾವಣಗೆರೆ, ಮೇ 29- ಕೋವಿಡ್-19 ಕೊರೊನಾ ಸೋಂಕು ತಡೆಗಟ್ಟಲು ಜಿಲ್ಲೆಯಲ್ಲಿರುವ 18 ವರ್ಷ ಮೇಲ್ಪಟ್ಟ ಎಲ್ಲಾ ವಿಕಲಚೇತನರಿಗೆ ಹಾಗೂ ವಿಕಲ ಚೇತನರ ಆರೈಕೆದಾರರಿಗೆ ಆದ್ಯತೆಯ ಮೇರೆಗೆ ಕೋವಿಡ್-19 ಲಸಿಕೆ ನೀಡಲಾಗುತ್ತಿದ್ದು, ಅದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಕಾನೂನು ಸೇವಾ ಪ್ರಾಧಿಕಾರದ ಪ್ರಭಾರ ಸದಸ್ಯ ಕಾರ್ಯದರ್ಶಿ ಪ್ರವೀಣ್ ನಾಯಕ್ ತಿಳಿಸಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಮತ್ತು ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯ ವತಿಯಿಂದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಉಪನಿರ್ದೇಶಕರ ಕಚೇರಿ ಆವರಣದಲ್ಲಿ ಏರ್ಪಡಿಸಿದ್ದ ವಿಕಲಚೇತನರಿಗೆ ಲಸಿಕೆ ಜಾಗೃತಿ ಅಭಿಯಾನ ಉದ್ದೇಶಿಸಿ ಮಾತನಾಡಿದರು.

ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾದ ಕೆ.ಎನ್.ಫಣೀಂದ್ರ ಅವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಅಂಗವಿಲತೆ ಹೊಂದಿರುವವರಿಗೆ ಕಾನೂನು ಸೇವಾ ಪ್ರಾಧಿಕಾರದಿಂದ ಸಹಾಯ ಮಾಡುವಂತೆ ನಿರ್ದೇಶನ ನೀಡಲಾಗಿದ್ದು, ಅದರಂತೆ ಎಲ್ಲಾ ವಿಕಲಚೇತನರಿಗೆ ಲಸಿಕೆ ಹಾಕಿಸಿಕೊಳ್ಳಲು ಜಾಗೃತಿ ಅಭಿಯಾನ ಹಮ್ಮಿಕೊಂಡಿರುವುದಾಗಿ ಅವರು ತಿಳಿಸಿದರು.

ಸಾಮಾನ್ಯ ಜನರಿಗೆ ಕೊರೊನಾ ಸೋಂಕು ತಗುಲಿದರೆ ಬೇಗ ಗುಣಮುಖರಾಗುತ್ತಾರೆ. ಆದರೆ ಅಂಗವಿಕಲರು ಔಷಧಿಗಳನ್ನು ಪಡೆಯುತ್ತಿದ್ದು, ಅವರಿಗೆ ಸೋಂಕು ತಗುಲಿದರೆ ಜೀವಕ್ಕೆ ತೀವ್ರ ಹಾನಿ ಉಂಟಾಗುವ ಸಂಭವವಿರುವುದರಿಂದ ವಿಕಲಚೇತನರು ತಡಮಾಡದೇ ಲಸಿಕೆಯನ್ನು ಹಾಕಿಸಿಕೊಳ್ಳಲು ಮುಂದೆ ಬರಬೇಕು ಎಂದು ಕರೆ ನೀಡಿದರು.

ಬುದ್ಧಿಮಾಂದ್ಯ ಮತ್ತು ಮಾನಸಿಕ ಅಸ್ವಸ್ಥರು ಮತ್ತು ಅವರ ಆರೈಕೆದಾರರು ಕಡ್ಡಾಯವಾಗಿ ಲಸಿಕೆ ಹಾಕಿಸಿಕೊಳ್ಳಬೇಕು. ಒಂದು ವೇಳೆ ಲಸಿಕಾ ಕೇಂದ್ರಕ್ಕೆ ಆಗಮಿಸಲು ಆಗದೇ ಇರುವಂತಹ ವಿಕಲಚೇತನರಿಗೆ ಮನೆ ಬಾಗಿಲಿಗೆ ಬಂದು ಲಸಿಕೆಯನ್ನು ಹಾಕಲಾಗುವುದು. ಅಂತಹವರು ಅಂಗವಿಕಲರ ಕಲ್ಯಾಣ ಇಲಾಖೆಯ ದೂರವಾಣಿ ಸಂಖ್ಯೆ 263939 ಅಥವಾ 263936 ಕ್ಕೆ ಕರೆ ಮಾಡಿ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಮಾಹಿತಿ ನೀಡಿದರು.

ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಜಿ.ಎಸ್. ಶಶಿಧರ್ ಪ್ರಾಸ್ತಾವಿಕವಾಗಿ ಮಾತನಾಡಿ, ಅಂಗವೈಕಲ್ಯದಿಂದಾಗಿ ಪ್ರಯಾಣಿಸಲು ಸಾಧ್ಯವಾಗದ ವ್ಯಕ್ತಿಗಳ ಪ್ರಕರಣಗಳಲ್ಲಿ ಮನೆ ಬಾಗಿಲಿಗೆ ಲಸಿಕೆ ನೀಡಲಾಗುತ್ತದೆ. ಕೊರೊನಾ ಸೋಂಕು ತಡೆಗಟ್ಟಲು ಹೈಕೋರ್ಟ್ ನಿರ್ದೇಶನದ ಮೇರೆಗೆ ರಾಜ್ಯ ಸರ್ಕಾರವು 18 ವರ್ಷ ಮೇಲ್ಪಟ್ಟ ವಿಕಲಚೇತನರಿಗೆ ಕೋವಿಡ್-19 ನಿಗ್ರಹ ಲಸಿಕೆಯನ್ನು ಜಿಲ್ಲಾ ಚಿಗಟೇರಿ ಆಸ್ಪತ್ರೆಯ ಆವರಣದಲ್ಲಿರುವ ಮಕ್ಕಳ ಆಸ್ಪತ್ರೆಯಲ್ಲಿ ಪ್ರತಿದಿನ 100 ಜನರಿಗೆ ಆದ್ಯತೆಯ ಮೇಲೆ ಲಸಿಕೆ ನೀಡಲಾಗುತ್ತಿದೆ ಎಂದು ಹೇಳಿದರು.

ಈ ವೇಳೆ ಕೋವಿಡ್-19 ಲಸಿಕೆ ಪಡೆದು ಜೀವ ಉಳಿಸಿ, ವಿಕಲಚೇತನರೇ ಲಸಿಕೆ ಪಡೆಯಿರಿ, ವಿಕಲಚೇತನರೇ ಲಸಿಕೆ ಪಡೆಯಲು ಹಿಂಜರಿಯಬೇಡಿ, ಕೋವಿಡ್ ಲಸಿಕೆ ಜೀವ ರಕ್ಷಕ ಲಸಿಕೆ ಪಡೆಯಲು ಹಿಂಜರಿಯಬೇಡಿ ಎಂಬಂತಹ ಘೋಷಣೆಗಳನ್ನು ಕೂಗಿ ಜಾಗೃತಿ ಮೂಡಿಸಿದರು.

ಈ ಸಂದರ್ಭದಲ್ಲಿ ನಗರದ ಮಹಾನಗರ ಪಾಲಿಕೆಯ ಮಂಜುನಾಥ್, ನಾಗರತ್ನ, ಸೌಮ್ಯ ಹಾಗೂ ಇಲಾಖೆಯ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

# ಪುತ್ರನ ಸಾವು : ಎಫ್.ಐ.ಆರ್. ದಾಖಲಿಸಲು ಶಾಸಕನ ಪರದಾಟ

ಹರ್ದೋಯಿ (ಉತ್ತರ ಪ್ರದೇಶ), ಮೇ 29 – ಕೊರೊನಾದಿಂದಾಗಿ ಏಪ್ರಿಲ್ ತಿಂಗಳಲ್ಲಿ ಪುತ್ರನನ್ನು ಕಳೆದುಕೊಂಡಿದ್ದ ಉತ್ತರ ಪ್ರದೇಶದ ಆಡಳಿತಾರೂಢ ಬಿಜೆಪಿ ಶಾಸಕರೊಬ್ಬರು, 34 ದಿನಗಳು ಕಳೆದರೂ ಆಸ್ಪತ್ರೆಯ ನಿರ್ಲಕ್ಷ್ಯದ ವಿರುದ್ಧ ಎಫ್.ಐ.ಆರ್. ದಾಖಲಿಸಲು ಸಾಧ್ಯವಾಗಿಲ್ಲ ಎಂದಿದ್ದಾರೆ.

ಹರ್ದೋಯಿ ಜಿಲ್ಲೆಯ ಸಂಡಿಲಾದ ಶಾಸಕರಾಗಿರುವ ರಾಜಕುಮಾರ್ ಅಗರ್‌ವಾಲ್, ಈ ಬಗ್ಗೆ ಮುಖ್ಯಮಂತ್ರಿ ಹಾಗೂ ಆರೋಗ್ಯ ಸಚಿವರಿಗೆ ದೂರಿನ ಪತ್ರ ಬರೆದಿರುವುದಾಗಿಯೂ ಹೇಳಿದ್ದಾರೆ.

ತಮ್ಮ 30 ವರ್ಷದ ಪುತ್ರನನ್ನು ಕಕೋರಿ ನಗರದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ನಿರ್ಲಕ್ಷ್ಯದ ಕಾರಣದಿಂದಾಗಿ ಪುತ್ರ ಏಪ್ರಿಲ್ 22ರಂದು ಸಾವನ್ನಪ್ಪಿರುವುದಾಗಿ ಅವರು ಹೇಳಿದ್ದಾರೆ. ಆಸ್ಪತ್ರೆ ವಿರುದ್ಧ ಕಕೋರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೆ. ಆದರೆ, ಪೊಲೀಸರು ಮುಖ್ಯ ವೈದ್ಯಕೀಯ ಅಧಿಕಾರಿಯ ವಿಚಾರಣೆ ನಡೆಸದೇ ವರದಿ ದಾಖಲಿಸುವುದಿಲ್ಲ ಎಂದು ಹೇಳಿದ್ದಾರೆ ಎಂದು ಅಗರ್‌ವಾಲ್ ತಿಳಿಸಿದ್ದಾರೆ.

ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಹಾಗೂ ಆರೋಗ್ಯ ಸಚಿವ ಜೈ ಪ್ರತಾಪ್ ಸಿಂಗ್ ಅವರಿಗೂ ಪತ್ರ ಬರೆದಿದ್ದೆ. ಆದರೂ, ಇದುವರೆಗೂ ದೂರು ಎಫ್.ಐ.ಆರ್. ದಾಖಲಾಗಿಲ್ಲ ಎಂದವರು ಹೇಳಿದ್ದಾರೆ.

ಕನ್ಸಲ್ಟೆನ್ಸಿ ಸರ್ವೀಸಸ್

ನಮ್ಮ ಕಛೇರಿಯಲ್ಲಿ ಬಿಲ್ಡಿಂಗ್ ಪ್ಲ್ಯಾನ್ಸ್, ಎಸ್ಟಿಮೇಷನ್, ಲೇಔಟ್ ಪ್ಲ್ಯಾನ್ಸ್, ಆನ್‌ಲೈನ್ ಅಪ್‌ಲೋಡ್, ಬ್ಲೂ ಪ್ರಿಂಟ್ಸ್ ಮತ್ತು ಪ್ಲಾಟರ್ ಪ್ರಿಂಟ್ಸ್ (A4-A0 ಸೈಜ್)

Civil ಮಾಡಿಕೊಡಲಾಗುತ್ತದೆ. ಸಂಪರ್ಕಿಸಿ:

ಶ್ರೀ ವೀರಭದ್ರೇಶ್ವರ ಕನ್ಸಲ್ಟೆನ್ಸಿ ಸರ್ವೀಸಸ್ VCS

ಪಿ.ಜೆ. ಲಾಡ್ಜ್ ಎದುರು, ಎ.ವಿ.ಕೆ. ಕಾಲೇಜ್ ರಸ್ತೆ, ಪಿ.ಜೆ. ಬಡಾವಣೆ, ದಾವಣಗೆರೆ.

ಮೊ. 99168 73399, 93432 77422, 99161 73399

# ಜಿಲ್ಲೆಯಲ್ಲಿ 845 ಗುಣಮುಖ 449 ಪಾಸಿಟಿವ್, 5 ಸಾವು

ದಾವಣಗೆರೆ, ಮೇ 29- ಜಿಲ್ಲೆಯಲ್ಲಿ ಶನಿವಾರ 449 ಜನರಲ್ಲಿ ಕೊರೊನಾ ಸೋಂಕು ದೃಢಪಟ್ಟಿದ್ದು, ಐವರು ಸಾವನ್ನಪ್ಪಿದ ಬಗ್ಗೆ ಜಿಲ್ಲಾಡಳಿತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ದಾವಣಗೆರೆ ತಾಲ್ಲೂಕಿನಲ್ಲಿ 188, ಹರಿಹರ 100, ಜಗಳೂರು 22, ಚನ್ನಗಿರಿ 69, ಹೊನ್ನಾಳಿ 62 ಹಾಗೂ ಹೊರ ಜಿಲ್ಲೆಯ 8 ಜನರಲ್ಲಿ ಸೋಂಕು ದೃಢಪಟ್ಟಿದೆ. ಜಿಲ್ಲಾದ್ಯಂತ 845 ಜನರು ಗುಣಮುಖರಾಗಿ ಬಿಡುಗಡೆಯಾಗಿದ್ದಾರೆ.

ಜಗಳೂರು ತಾಲ್ಲೂಕು ಹೊಸಕೇರಿಯ 68 ವರ್ಷದ ಮಹಿಳೆ, ಉಜ್ಜಪ್ಪವಡೇರನಹಳ್ಳಿಯ 65 ವರ್ಷದ ಮಹಿಳೆ, ಹರಿಹರ ತಾಲ್ಲೂಕಿನ ಭಾನುವಳ್ಳಿ ಗ್ರಾಮದ 55ರ ಮಹಿಳೆ, ಹಾಲಿವಾಣದ 60ರ ಮಹಿಳೆ ಹಾಗೂ ದಾವಣಗೆರೆ ಎಂಸಿಸಿ ಬಿ ಬ್ಲಾಕ್‌ನ 56 ವರ್ಷದ ಮಹಿಳೆ ಕೋವಿಡ್ ಸೋಂಕಿನಿಂದಾಗಿ ಮೃತಪಟ್ಟಿದ್ದಾರೆ.

ಜಿಲ್ಲೆಯಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 4936 ಇದ್ದು, ಇಲ್ಲಿವರೆಗೆ 347 ಜನರು ಸಾವನ್ನಪ್ಪಿದ್ದಾರೆ.

# ಕುರುಬ ಸಮಾಜದ ಹಿರಿಯ ಮುಖಂಡ ಕೆಂಗೋ ಹನುಮಂತಪ್ಪ ಇನ್ನಿಲ್ಲ



ದಾವಣಗೆರೆ,ಮೇ 29- ಜಿಲ್ಲೆಯ ಕುರುಬರ ಸಮಾಜದ ಹಿರಿಯ ಮುಖಂಡರೂ, ಜಿಲ್ಲೆಯ ಅಹಿಂದ ಹೋರಾಟಗಾರರೂ, ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡರೂ, ಕರ್ನಾಟಕ ಸರ್ಕಾರದ ಬಯಲು ಸೀಮೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷರೂ ಆಗಿದ್ದ ಕೆಂಗೋ ಹನುಮಂತಪ್ಪ ಅವರು ಇಂದು ಬೆಳಿಗ್ಗೆ ಅಕಾಲಿಕವಾಗಿ ನಿಧನರಾದರು.

ಮೃತರಿಗೆ ಸುಮಾರು 82 ವರ್ಷ ವಯಸ್ಸಾಗಿತ್ತು. ಪತ್ನಿ, ಇಬ್ಬರು ಪುತ್ರರು, ನಾಲ್ವರು ಪುತ್ರಿಯರು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯನ್ನು ಅವರ ಸ್ವಗ್ರಾಮ ದಾವಣಗೆರೆ ತಾಲ್ಲೂಕಿನ ಚಿಕ್ಕಬೂದಿಹಾಳ್ ಗ್ರಾಮದಲ್ಲಿರುವ ಅವರ ತೋಟದಲ್ಲಿ ಸಂಜೆ ನೆರವೇರಿಸಲಾಯಿತು.

**ಸಂಕ್ಷಿಪ್ತ ಪರಿಚಯ :** ಚಿಕ್ಕಬೂದಿಹಾಳ್ ಗ್ರಾಮದ ದೊಡ್ಡದ್ಯಾಮಪ್ಪ ಮತ್ತು ಶ್ರೀಮತಿ ಭೀಮಮ್ಮ ದಂಪತಿಯ ಪುತ್ರರಾದ ಕೆಂಗೋ ಹನುಮಂತಪ್ಪ ಸಾಮಾನ್ಯ ಕುಟುಂಬದಿಂದ ಬಂದವರು. 1962ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಿಂದ ಸಮಾಜಶಾಸ್ತ್ರದಲ್ಲಿ ಪದವಿ ಪಡೆದಿದ್ದರು.

ಹಳ್ಳಿಗಾಡಿನ ಸೊಬಗು ಮತ್ತು ಸ್ವಾತಂತ್ರ್ಯ ಹೋರಾಟದ ಮನೋಭಾವದಲ್ಲಿ ಬೆಳೆದ ಅವರು, ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ ಸರ್ಕಾರಿ ನೌಕರರಾಗಿ ತಮ್ಮ ಜೀವನ ಆರಂಭಿಸಿದರು. ಸಾಮಾಜಿಕ ಕಳಕಳಿ ಹೊಂದಿದ್ದ ಅವರು, ಸಾರ್ವಜನಿಕರ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವ ನಿಟ್ಟಿನಲ್ಲಿ **(7ನೇ ಪುಟಕ್ಕೆ)**

# ಮುಂಬೈನಲ್ಲಿ ಶತಕ ದಾಟಿದ ಪೆಟ್ರೋಲ್ ಬೆಲೆ

ನವದೆಹಲಿ, ಮೇ 29 – ಈ ತಿಂಗಳಲ್ಲಿ 15ನೇ ಬಾರಿ ತೈಲ ಬೆಲೆ ಏರಿಕೆಯಾದ ನಂತರ, ಮುಂಬೈನಲ್ಲಿ ಲೀಟರ್ ಪೆಟ್ರೋಲ್ ಬೆಲೆ 100 ರೂ.ಗಳ ಗಡಿ ದಾಟಿದೆ. ಶನಿವಾರ ಪೆಟ್ರೋಲ್ ಬೆಲೆಯನ್ನು ಲೀಟರ್‌ಗೆ 26 ಪೈಸೆ ಹಾಗೂ ಡೀಸೆಲ್ ಬೆಲೆಯನ್ನು ಲೀಟರ್‌ಗೆ 28 ಪೈಸೆ ಹೆಚ್ಚಿಸಲಾಗಿದೆ ಎಂದು ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ತಿಳಿಸಿವೆ.

ಈ ತಿಂಗಳಲ್ಲಿ 15ನೇ ಬಾರಿ ತೈಲ ಬೆಲೆ ಏರಿಕೆಯಾಗಿರುವುದರಿಂದ, ಪೆಟ್ರೋಲ್ ಹಾಗೂ ಡೀಸೆಲ್ ಬೆಲೆ ದಾಖಲೆ ಮಟ್ಟಕ್ಕೆ ತಲುಪಿದೆ. ರಾಜಸ್ಥಾನ, ಮಧ್ಯ ಪ್ರದೇಶ ಹಾಗೂ ಮಹಾರಾಷ್ಟ್ರಗಳ ಹಲವಾರು ನಗರಗಳಲ್ಲಿ ಈ ಹಿಂದೆಯೇ ಪೆಟ್ರೋಲ್ ಬೆಲೆ 100 ರೂ.ಗಳ ಗಡಿ ದಾಟಿದೆ. ಮುಂಬೈನಲ್ಲೀಗ ಲೀಟರ್ ಪೆಟ್ರೋಲ್ ಬೆಲೆ 100.19 ರೂ. ಆಗಿದೆ.


**PAL SCIENTIFIC & SURGICALS**

*An ISO Certified Company*

1st Floor, Banajar Education Trust Complex, Opp. KEB Quarters, Chetana Hotel Road, P.J. Extension, Davanagere - 577 002.

**Mobile : 98458 99777, 98864 52549**

**AUTHORISED DISTRIBUTOR FOR MICROTEK**

*Available with Best Prices and Warranty*

♦ PULSE OXIMETER ♦ INFRARED THERMOMETER ♦ DIGITAL FLEXIBLE THERMOMETER ♦ BLOOD PRESSURE MONITOR ♦ NEBULIZER ♦ OXYGEN CONCENTRATOR ♦ SANITIZER ♦ VAPOURISER ♦ SANITIZER DISPENSING MACHINE ♦ OXYCAN FOR EMERGENCY USE




*A Complete source of Scientific & Medical Surgical Instruments, Chemicals, Borosil Glassware & Laboratory Equipments*

OUR SISTER CONCERN : **CHIRAG SCIENTIFIC & SURGICALS**


# ದೇಶದಲ್ಲಿ 1.73 ಲಕ್ಷ ಕೊರೊನಾ ಸೋಂಕಿತರು

ನವದೆಹಲಿ, ಮೇ 29 – ದೇಶದಲ್ಲಿ ಶನಿವಾರ 1.73 ಲಕ್ಷ ಕೊರೊನಾ ಸೋಂಕಿತರು ಕಂಡು ಬಂದಿದ್ದು, ಇದು ಕಳೆದ 45 ದಿನಗಳಲ್ಲಿ ಕಡಿಮೆಯಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ. ಟೆಸ್ಟ್‌ಗಳಲ್ಲಿ ಪಾಸಿಟಿವ್ ಕಂಡು ಬರುವ ಪ್ರಮಾಣ ಶೇ.8.36ಕ್ಕೆ ಇಳಿಕೆಯಾಗಿದೆ. ಕಳೆದ ಐದು ದಿನಗಳಲ್ಲಿ ಪಾಸಿಟಿವ್ ದರ ಶೇ.10ಕ್ಕಿಂತ ಕಡಿಮೆ ಇದೆ ಎಂದು ಸಚಿವಾಲಯ ಹೇಳಿದೆ.

# ರಾಜ್ಯದಲ್ಲಿ 20 ಸಾವಿರ ಕೊರೊನಾ ಸೋಂಕಿತರು

ಬೆಂಗಳೂರು, ಮೇ 29 – ರಾಜ್ಯದಲ್ಲಿ ಶನಿವಾರ 20,628 ಜನರಿಗೆ ಸೋಂಕು ತಗಲಿದ್ದು, 492 ಜನ ಸಾವನ್ನಪ್ಪಿದ್ದಾರೆ ಎಂದು ಆರೋಗ್ಯ ಇಲಾಖೆ ತಿಳಿಸಿದೆ. ಇದೇ ದಿನ 42,444 ಜನರು ಗುಣಮುಖರಾಗಿದ್ದಾರೆ. ಶನಿವಾರ ಪತ್ತೆಯಾದ ಬೆಂಗಳೂರಿನ ಪ್ರಕರಣಗಳಲ್ಲಿ 4,889 ದೃಢಪಟ್ಟಿದ್ದು, 21,126 ಜನ ಗುಣಮುಖರಾಗಿ, 278 ಜನ ಸಾವನ್ನಪ್ಪಿದ್ದಾರೆ.

# ವಿವಾಹ ವಾರ್ಷಿಕೋತ್ಸವ ಶುಭಾಶಯಗಳು



ಇಂದು ತಮ್ಮ 38ನೇ ವಿವಾಹ ವಾರ್ಷಿಕೋತ್ಸವ ಸಂಭ್ರಮದಲ್ಲಿರುವ

**ಶ್ರೀ ಹೆಚ್. ಚನ್ನಕೇಶವಮೂರ್ತಿ ಮತ್ತು ಶ್ರೀಮತಿ ಟಿ. ರತ್ನಮ್ಮ**

ದಂಪತಿಗೆ ಹಾರ್ದಿಕ ಶುಭಾಶಯಗಳು.

ಶುಭ ಕೋರುವವರು :

✦ ಎಮ್. ಲತ ✦ ಎ. ವಿನಾಯಕ ✦ ಸಿ. ಲಕ್ಷ್ಮಿ ✦ ಸಿ. ಮಂಜುನಾಥ್ ✦ ಎಮ್. ಸಹಸ್ರ ✦ ಜೆ.ಸಿ. ತಿಪ್ಪೇಸ್ವಾಮಿ ✦ ಕೆ. ರಮ್ಯ ✦ ಟಿ. ಚಾತುರ್ಯ

# ಅಸ್ಸಾಂ : ಕೊರೊನಾದಿಂದ ಶಾಸಕರ ಸಾವು

ಗುವಾಹತಿ, ಮೇ 29 – ಅಸ್ಸಾಂನಲ್ಲಿ ವಾರದಲ್ಲೇ ಇಬ್ಬರು ಶಾಸಕರು ಕೊರೊನಾ ಸೋಂಕಿನಿಂದ ಸಾವನ್ನಪ್ಪಿದ್ದಾರೆ. ಶನಿವಾರ ಯು.ಪಿ.ಪಿ.ಎಲ್. ಶಾಸಕ ಲೆಹೊ ರಾಮ್ ಬೋರೋ ಅವರು ಕೊರೊನಾ ಸೋಂಕಿನಿಂದ ಆಸ್ಪತ್ರೆಯಲ್ಲಿ ಸಾವನ್ನಪ್ಪಿದ್ದಾರೆ.

ಬೋರೋ ಅವರನ್ನು ಗುವಾ ಹತಿ ವೈದ್ಯಕೀಯ ಕಾಲೇಜು ಆಸ್ಪ ತ್ರೆಗೆ ದಾಖಲಿಸಲಾಗಿತ್ತು. ಅವರಿಗೆ 63 ವರ್ಷ ವಯಸ್ಸಾಗಿತ್ತು.

ಕಳೆದ ಬುಧವಾರದಂದು ನಾಲ್ಕು ಬಾರಿ ಶಾಸಕರಾಗಿದ್ದ ಮಜೇಂದ್ರ ನರ್ಜರಿ ಅವರು ಕೊರೊನಾದಿಂದ ಸಾವನ್ನಪ್ಪಿದ್ದರು.

# ಭಾವಪೂರ್ಣ ಶ್ರದ್ಧಾಂಜಲಿ



ದಿ.: 29.05.2021ರಂದು ನಿಧನರಾದ ಕುರುಬ ಸಮಾಜದ ಮುಖಂಡರು, ಬಯಲು ಸೀಮೆ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷರು, ಹಿರಿಯರಾದ

**ಕೆಂಗೋ ಹನುಮಂತಪ್ಪ** ಅವರಿಗೆ

ಭಾವಪೂರ್ಣ ಶ್ರದ್ಧಾಂಜಲಿ. ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ ದಯಪಾಲಿಸಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

**ಬೆಳ್ಳೂಡಿ ಹನುಮಂತಪ್ಪ ಮತ್ತು ಮಕ್ಕಳು**

**ಶ್ರೀ ಬೆಳ್ಳೂಡಿ ಪೇಂಟ್ಸ್ ಅಂಡ್ ಪೈಪ್ಸ್**

ಬೀರಲಿಂಗೇಶ್ವರ ಕಾಂಪ್ಲೆಕ್ಸ್ ಎವಿಕೆ ಕಾಲೇಜು ರಸ್ತೆ, ದಾವಣಗೆರೆ.

# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 28.05.2021ರ ಶುಕ್ರವಾರ ನಿಧನರಾದ ವಿಜಯನಗರ ಸೊಸೈಟಿ ನಿರ್ದೇಶಕರು, ಮಂಜುನಾಥ ಇಂಡಸ್ಟ್ರೀಸ್ ಮಾಲೀಕರಾದ ಶ್ರೀ ಬಿ.ರಮೇಶ್ ಅವರ ಪುತ್ರ

**ಶ್ರೀ ಬಿ.ಆರ್. ವಿಶ್ವನಾಥ್**

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದು:ಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಯಶಸ್ವಿನಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ**

ಪಿ.ಬಿ. ರಸ್ತೆ, ದಾವಣಗೆರೆ.



# ಮತ್ತೆ ಹುಟ್ಟಿ ಬಾ ರಾಜಣ್ಣ

ದಿನಾಂಕ 29-05-2021 ರಂದು ನಿಧನರಾದ ಕುಂಬಳೂರು ಗ್ರಾಮದ ಉತ್ಸಾಹಿ ಯುವ ಮುಖಂಡರೂ, ಪ್ರಥಮ ದರ್ಜೆ ಗುತ್ತಿಗೆದಾರರೂ ಆದ ನಮ್ಮೆಲ್ಲರ ನೆಚ್ಚಿನ ಗೆಳೆಯ

**ಶ್ರೀ ಹೊರಟ್ಟಿ ರಾಜು**

ಅವರ ಅಗಲಿಕೆ ನಮಗೆ ತೀವ್ರ ದುಃಖ ಹಾಗೂ ಆಘಾತ ತಂದಿದೆ.

**ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ,**

ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಮತ್ತು ಅವರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಹಾಗೂ ಬಂಧು-ಮಿತ್ರರಿಗೆ ನೀಡಲೆಂದು ಪ್ರಾರ್ಥಿಸುತ್ತೇವೆ.

✦ ಬಿ.ಎಂ. ವಾಗೀಶ್‌ಸ್ವಾಮಿ, ಜಿ.ಪಂ. ಸದಸ್ಯರು, ಭಾನುವಳ್ಳಿ ಕ್ಷೇತ್ರ ✦ ಹಿಂಡಸಘಟ್ಟಿ ಲಿಂಗರಾಜ್, ಅಧ್ಯಕ್ಷರು, ಹರಿಹರ ತಾ. ಗ್ರಾಮಾಂತರ ಬಿಜೆಪಿ ಘಟಕ
✦ ಶ್ರೀಮತಿ ಪಾನಿಪೂರಿ ರಂಗನಾಥ್, ಮಾಜಿ ಅಧ್ಯಕ್ಷರು, ಪುರಸಭೆ, ಮಲೇಬೆನ್ನೂರು ✦ ಬಿ.ಎಂ ಚನ್ನೇಶ್‌ಸ್ವಾಮಿ, ಮಾಜಿ ಉಪಾಧ್ಯಕ್ಷರು, ಪುರಸಭೆ, ಮಲೇಬೆನ್ನೂರು
✦ ಸಿ.ಹೆಚ್. ರವಿ, ಗುತ್ತಿಗೆದಾರರು, ವಿನಾಯಕ ನಗರ ಕ್ಯಾಂಪ್ ✦ ಎಸ್. ಕರಿಬಸಪ್ಪ, ಅಧ್ಯಕ್ಷರು, ಸಾಂಸ್ಕೃತಿಕ ಗೆಳೆಯರ ಬಳಗ, ಮಲೇಬೆನ್ನೂರು
✦ ಎಸ್. ಮೃತ್ಯುಂಜಯ, ಮಾಜಿ ಅಧ್ಯಕ್ಷರು, ಹರಿಹರ ತಾ.ಗ್ರಾ ಬಿಜೆಪಿ ಘಟಕ, ಹಿಂಡಸಘಟ್ಟ ✦ ಗೋವಿನಹಾಳ್ ರಾಜು, ಸದಸ್ಯರು, ಭದ್ರಾ ಕಾಡಾ ಸಮಿತಿ, ಮಲವಗೊಪ್ಪ
✦ ಸಿ.ಹೆಚ್. ದೇವರಾಜ್, ಸಂಸದರ ಆಪ್ತ ಸಹಾಯಕರು, ದಾವಣಗೆರೆ ✦ ಜೆ.ಎಂ ಮಂಜುನಾಥಸ್ವಾಮಿ, ಗುತ್ತಿಗೆದಾರರು, ಮಲೇಬೆನ್ನೂರು
✦ ಕೆ.ಹೆಚ್ ನಾಗನಗೌಡ, ಮಾಜಿ ಅಧ್ಯಕ್ಷರು, ಹರಿಹರ ತಾ. ಗ್ರಾ ಬಿಜೆಪಿ ಘಟಕ, ಕೆ.ಎನ್. ಹಳ್ಳಿ ✦ ಬೆಳ್ಳೂಡಿ ಬಕ್ಕೇಶ್, ಬಿಜೆಪಿ ಮುಖಂಡರು
✦ ರಾಜು ವೆರ್ಣೇಕರ್, ಬಂಗಾರದ ಅಂಗಡಿ, ಮಲೇಬೆನ್ನೂರು ✦ ಕೆ ಉಜ್ಜೇಶ್, ಕೊಮಾರನಹಳ್ಳಿ ✦ ಹೆಚ್.ಎಂ ರೇಣುಕಾರಾಧ್ಯ, ಗುತ್ತಿಗೆದಾರರು, ಹರಳಹಳ್ಳಿ
✦ ಕೆ.ಸಿ ಚಿದಾನಂದ್ ✦ ದೊರೆಸ್ವಾಮಿ ✦ ಪಿ.ಆರ್. ರಾಜು ✦ ಬಿ. ಚಂದ್ರಪ್ಪ ✦ ಓ.ಜಿ ಧನಂಜಯ ✦ ಬೆಣ್ಣೆಹಳ್ಳಿ ಬಸವರಾಜ್ ✦ ಜಯಣ್ಣ ✦ ಉಡೇದರ ಸಿದ್ದೇಶ್, ✦ ಮಂಜು ಬುಕ್‌ಸ್ಟಾಲ್, ಮಲೇಬೆನ್ನೂರು
✦ ರಂಗನಾಥ್, ಶ್ರೀನಿವಾಸ್, ಗಣೇಶ್‌ಮೂರ್ತಿ, ಹರಳಹಳ್ಳಿ ✦ ಐರಣಿ ಮಹೇಶಣ್ಣ, ರಾಮಣ್ಣ ಸ್ವಾಮಿ, ಎಂ. ಕಿರಣ್, ಕೊಮಾರನಹಳ್ಳಿ ✦ ಎನ್.ಎಂ ಪಾಟೀಲ್, ಗ್ರಾ.ಪಂ ಸದಸ್ಯರು, ಜಿಗಳಿ.
✦ ಬಿಳಸನೂರು ಚಂದ್ರಪ್ಪ, ಜಿ.ಪಿ. ಮಂಜುನಾಥ್, ಜೆ. ಕೃಷ್ಣಮೂರ್ತಿ, ಜಿಗಳಿ ✦ ಮಲ್ಲಯ್ಯ, ವಿಜಯಕುಮಾರ್, ವಡೆಯರ ಬಸಾಪುರ.

✦ **ಸರ್ವಸದಸ್ಯರು, ಸಾಂಸ್ಕೃತಿಕ ಗೆಳೆಯರ ಬಳಗ, ಮಲೇಬೆನ್ನೂರು ಮತ್ತು ಕುಂಬಳೂರು ಗ್ರಾಮಸ್ಥರು.**

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte